

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor: MARUTI BASAVANTAPPA HOSAMANI

Cell : +91 9741319119

# ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SK NEWS ಕನ್ನಡ

SIHI KAHI

KANNADA DAILY MORNING

BAGALKOT

Volume : 07 | Issue : 21 | Tuesday 24-09-2024 | E-mail : maruti.b.hosamani76@gmail.com | Page: 4 | Price : Rs. 1/-


# ತುಂಗಭದ್ರಾ ಜಲಾಶಯ ಭರ್ತಿ–ಮುಖ್ಯಮಂತ್ರಿಗಳಿಂದ ಬಾಗಿನ ಸಮರ್ಪಣೆ

**ಸಿಹಿ ಕಹಿ ಸುದ್ದಿ,**

**ಹೊಸಪೇಟೆ :** ಬಯಲು ಸೀಮೆಯ ಜನರ ಜೀವನದಿ ತುಂಗಭದ್ರಾ ಜಲಾಶಯದ ಪ್ರದೇಶಕ್ಕೆ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಅವರು ಸೆಪ್ಟೆಂಬರ್ 22 ರಂದು ಭೇಟಿ ನೀಡಿ ಡ್ಯಾಮ್ ಭರ್ತಿಯಾದ ಹಿನ್ನೆಲೆಯಲ್ಲಿ ಬಾಗಿನ ಸಮರ್ಪಣೆ ಮಾಡಿದರು.

ಮಲಪನ ಗುಡಿಯ ಉಲ್ತೆಪ್ಪ ಡೊಳ್ಳು ಕುಣಿತ ತಂಡ, ಹೂವಿನಹಡಗಲಿಯ ಸಮ್ಮಾಳ, ನಂಧಿ ಧ್ವಜ, ಹೊಸಪೇಟೆಯ ವೆಂಕಟೇಶ್ವರ ಕಂಚಿಮೇಳ ತಂಡದವರು ಮತ್ತು ಬಳ್ಳಾರಿ ಜಿಲ್ಲೆಯ ರಾಮಸಾಗರದ ವೀರವಣಿತೆ ಓಬವ್ವ ಕಹಳೆ ವಾದನ ಪ್ರದರ್ಶನಗಳು ಕಾರ್ಯಕ್ರಮದ ಮೆರಗು ಹೆಚ್ಚಿಸಿದವು.

ತುಂಗಭದ್ರಾ ಜಲಾಶಯದ ಆಣೆಕಟ್ಟಿನ ಮೇಲೆ ಹಬ್ಬದ ಸಂಭ್ರಮ ಕಂಡು ಬಂದಿತು. ತಳಿರು ತೋರಣ, ಹೂವುಗಳಿಂದ ಆಣೆಕಟ್ಟನ್ನು ಶೃಂಗರಿಸಲಾಗಿತ್ತು. ಪುರೋಹಿತರಾದ ಹೊಸಪೇಟೆಯ ಕೀರ್ತಿನಾಥ ಭಟ್, ತಿರುಮಲ ಭಟ್, ರಮೇಶ ಆಚಾರ್ಯ, ವಿದ್ಯಾಶಂಕರ, ಗೋವರ್ಧನ, ಆನಂದ ಜೋಶಿ ಅವರು ಬಾಗಿನ ಅರ್ಪಣೆಯ ಗಣಪತಿ ಪೂಜೆ, ಗಂಗಾಪೂಜೆ, ತುಂಗಭದ್ರಾ ನದಿಪೂಜೆ ನೆರವೇರಿಸಿದರು.

ವಿವಿಧ ಧಾರ್ಮಿಕ ಪೂಜಾ ಕಾರ್ಯಕ್ರಮಗಳ ಬಳಿಕ ಉಪ ಮುಖ್ಯಮಂತ್ರಿಗಳು, ಸಚಿವರು, ಸಂಸದರು, ಶಾಸಕರು, ವಿಧಾನ ಪರಿಷತ್ ಸದಸ್ಯರು ಹಾಗೂ ಇನ್ನೀತರ ಜನ ಪ್ರತಿನಿಧಿಗಳು ಮತ್ತು ಅಧಿಕಾರಿಗಳ ಸಮ್ಮುಖದಲ್ಲಿ ಮುಖ್ಯಮಂತ್ರಿಗಳು ತುಂಗಭದ್ರಾ ಜಲಾಶಯಕ್ಕೆ ಬಾಗಿನ ಸಮರ್ಪಿಸಿದರು.

ಈ ಸಂದರ್ಭದಲ್ಲಿ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಆಗಿರುವ ಉಪ ಮುಖ್ಯಮಂತ್ರಿಗಳಾದ ಡಿ.ಕೆ. ಶಿವಕುಮಾರ್, ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಹಾಗೂ ವಿಜಯನಗರ ಮತ್ತು ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವರಾದ ಬಿ.ಜೆಡ್ ಜಮೀರ್ ಅಹ್ಮದ್ ಖಾನ್, ಹಿಂದುಳಿದ ವರ್ಗಗಳ ಕಲ್ಯಾಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವರಾಜ್ ತಂಗಡಗಿ, ವೈದ್ಯಕೀಯ ಶಿಕ್ಷಣ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ ಶರಣಪ್ರಕಾಶ್ ರುದ್ರಪ್ಪ ಪಾಟೀಲ್, ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಎನ್. ಎಸ್.ಬೋಸರಾಜು, ವಿಧಾನಸಭೆ ವಿರೋಧ ಪಕ್ಷದ ಮುಖ್ಯ ಸಚೇತಕರು ಹಾಗೂ ಕುಷ್ಟಗಿ ವಿಧಾನಸಭಾ ಕ್ಷೇತ್ರ ಶಾಸಕರಾದ ದೊಡ್ಡನಗೌಡ ಹನುಮಗೌಡ ಪಾಟೀಲ, ಮಾನ್ಯ ಮುಖ್ಯಮಂತ್ರಿಗಳ ಆರ್ಥಿಕ



ಸಲಹೆಗಾರರು ಹಾಗು ಯಲಬುರ್ಗಾ ವಿಧಾನಸಭಾ ಕ್ಷೇತ್ರದ ಶಾಸಕರಾದ ಬಸವರಾಜ ರಾಯರಡ್ಡಿ, ಕರ್ನಾಟಕ ರಾಜ್ಯ ಕೈಗಾರಿಕ ಮೂಲ ಸೌಲಭ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷರು ಹಾಗೂ ಸಿಂಧನೂರು ವಿಧಾನಸಭಾ ಕ್ಷೇತ್ರದ ಶಾಸಕರಾದ ಹಂಪನಗೌಡ ಬಾದರ್ಲಿ, ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷರು ಹಾಗೂ ಕಂಪ್ಲಿ ವಿಧಾನಸಭಾ ಕ್ಷೇತ್ರ ಶಾಸಕರಾದ ಜೆ.ಎನ್.ಗಣೇಶ, ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ಅಧ್ಯಕ್ಷರು ಹಾಗೂ ಮಸ್ಕಿ ವಿಧಾನಸಭಾ ಕ್ಷೇತ್ರ ಶಾಸಕರಾದ ಆರ್.ಬಸನಗೌಡ ತುರುವಿಹಾಳ, ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ಅಧ್ಯಕ್ಷರು ಹಾಗೂ ರಾಯಚೂರು ಗ್ರಾಮೀಣ ವಿಧಾನಸಭಾ ಕ್ಷೇತ್ರ ಶಾಸಕರಾದ ಬಸನಗೌಡ ದದ್ದಲ್, ಕೊಪ್ಪಳ ಸಂಸದರಾದ ಕೆ.ರಾಜಶೇಖರ ಬಸವರಾಜ ಹಿಟ್ನಾಳ್, ಬಳ್ಳಾರಿ ಸಂಸದರಾದ ಈ. ತುಕಾರಾಂ, ದಾವಣಗೆರೆ ಸಂಸದರಾದ ಡಾ, ಪ್ರಭಾ ಮಲ್ಲಿಕಾರ್ಜುನ, ರಾಯಚೂರು ಸಂಸದರಾದ ಜಿ.ಕುಮಾರ್ ನಾಯಕ, ಕೂಡ್ಲಿಗಿ ಶಾಸಕರಾದ ಡಾ, ಶ್ರೀನಿವಾಸ್ ಎನ್.ಟಿ. ಹೂವಿನಹಡಗಲಿ ಶಾಸಕರಾದ ಎಲ್. ಕೃಷ್ಣ ನಾಯಕ, ಹರಪ್ಪನಹಳ್ಳಿ ಶಾಸಕರಾದ ಎಂ.ಪಿ ಲತಾ ಮಲ್ಲಿಕಾರ್ಜುನ್, ಕೊಪ್ಪಳ ವಿಧಾನಸಭಾ ಕ್ಷೇತ್ರದ ಶಾಸಕರಾದ ಕೆ. ರಾಘವೇಂದ್ರ ಹಿಟ್ನಾಳ, ವಿಧಾನ ಪರಿಷತ್ ಸದಸ್ಯರುಗಳಾದ ಬಸನಗೌಡ ಬಾದರ್ಲಿ, ತುಂಗಭದ್ರ ಯೋಜನೆ ಮುನಿರಾಬಾದ್ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಹಸನ್ಸಾಬ್ ನಬೀಬ್ ಸಾಬ್ ದೋಟಿಹಾಳ, ಹೊಸಪೇಟೆಯ ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷರಾದ ಎಚ್.ಎನ್.ಎಫ್ ಮಹಮದ್ ಇಮಾಮ್ ನಿಯಾಜಿ, ಹೊಸಪೇಟೆ ನಗರಸಭೆ ಅಧ್ಯಕ್ಷರಾದ ರೂಪೇಶ್ ಕುಮಾರ್ ಎನ್, ಕೃಷ್ಣಭಾಗ್ಯ ಜಲ ನಿಗಮದ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ಕೆ.ಪಿ.ಮೊಹನ್ ರಾಜ್, ಕಲಬುರಗಿ ವಿಭಾಗದ ಪ್ರಾದೇಶಿಕ ಆಯುಕ್ತರಾದ ಕೃಷ್ಣ ಭಾಜಪೇಯಿ, ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ, ನಲಿನ್ ಅತುಲ್, ವಿಜಯನಗರ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ನೋಂಗ್ಜಾಯ ಮೋಹಮ್ಮದ್ ಅಲಿ ಅಕ್ರಮ್ ಷಾ, ಕೊಪ್ಪಳ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ರಾಹುಲ್ ರತ್ನಂ ಪಾಂಡೆ–ಯ, ಬಳ್ಳಾರಿ ವಲಯದ ಪೊಲೀಸ್ ಮಹಾ ನಿರೀಕ್ಷಕರಾದ ಬಿ.ಎಸ್. ಲೋಕೇಶ್ ಕುಮಾರ್, ವಿಜಯನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಶ್ರೀಹರಿ ಬಾಬು ಬಿ.ಎಲ್., ಕೊಪ್ಪಳ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಡಾ ರಾಮ್ ಎಲ್. ಅರಸಿದ್ದಿ, ಅಪರ ಜಿಲ್ಲಾಧಿಕಾರಿಗಳಾದ ಇ ಬಾಲಕೃಷ್ಣಪ್ಪ, ಸಿದ್ರಾಮೇಶ್ವರ, ವಿಜಯನಗರ ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿಗಳಾದ ಸಲೀಂ ಪಾಶಾ, ಕೊಪ್ಪಳ ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿಗಳಾದ ಹೇಮಂತಕುಮಾರ, ಸಹಾಯಕ ಆಯುಕ್ತರಾದ ವಿವೇಕಾನಂದ ಪಿ., ಡಿವೈಎಸ್ಪಿ ಮಂಜುನಾಥ, ಜಲಸಂಪನ್ಮೂಲ ಇಲಾಖೆಯ ಕಾರ್ಯದರ್ಶಿಗಳಾದ ಕೃಷ್ಣಮೂರ್ತಿ ಬಿ.ಕುಲಕರ್ಣಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ ವ್ಯವಸ್ಥಾಪಕ ನಿರ್ದೇಶಕರಾದ ರಾಜೇಶ ಅಮ್ಮನಬಾವಿ, ತುಂಗಭದ್ರಾ ಬೋರ್ಡ್ ಕಾರ್ಯದರ್ಶಿಗಳಾದ ಒ.ಆರ್.ಕೆ. ರೆಡ್ಡಿ, ಕ.ನೀ.ನಿ.ನಿ, ನೀ.ಕೇ.ವ. ಮುನಿರಾಬಾದ್ ಮುಖ್ಯ ಅಭಿಯಂತರರಾದ ಹನುಮಂತ ಜಿ ದಾಸರ, ಮುನಿರಾಬಾದ್ ತುಂಗಭದ್ರ ಯೋಜನ ವೃತ್ತದ ಅಧೀಕ್ಷಕ ಅಭಿಯಂತರರಾದ ಎಲ್.ಬಸವರಾಜ್, ತುಂಗಭದ್ರಾ ಬೋರ್ಡ್ ಅಧೀಕ್ಷಕ ಅಭಿಯಂತರರಾದ ಶ್ರೀಕಾಂತ್ ರೆಡ್ಡಿ, ರಾಯಚೂರು ಜಿಲ್ಲೆಯ ಯರಮರಸ್ ಕ್ಯಾಂಪ್ ತುಂಗಭದ್ರ ಕಾಲುವೆ ನಿರ್ಮಾಣ ವೃತ್ತದ ಅಧೀಕ್ಷಕ ಅಭಿಯಂತರರಾದ ಕೆ.ಬಿ.ಹೆಚ್ ಶಿವಶಂಕರ್, ಮುನಿರಾಬಾದ್ ಕ.ನೀ.ನಿ.ನಿ ನಂ.1 ತುಂಗಭದ್ರಾ ಜಲಾಶಯ ವಿಭಾಗದ ಕಾರ್ಯಪಾಲಕ ಅಭಿಯಂತರರಾದ ಗಿರೀಶ್ ಸಿ ಮೇಟಿ, ತುಂಗಭದ್ರಾ ಬೋರ್ಡ್ ಕಾರ್ಯಪಾಲಕ ಅಭಿಯಂತರರಾದ ಜಿ.ಟಿ. ರವಿಚಂದ್ರ, ಮುನಿರಾಬಾದ್ ಕ.ನೀ.ನಿ.ನಿ ಮುಖ್ಯ ಕಾಮಗಾರಿ ಉಪ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಧರ್ಮರಾಜ ಎಲ್ ಹಾಗೂ ಇನ್ನೀತರರು ಇದ್ದರು.

**ಜಿಲ್ಲಾ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಎಚ್.ಎಂ.ಟಿ ರಾಜಕುಮಾರ್.ಕಂಪ್ಲಿ.ಬಳ್ಳಾರಿ**

# ನಾಳೆ ಬಸವೇಶ್ವರ ಪತ್ತಿನ ಸಹಕಾರಿ ಸಂಘದ 22 ನೇ. ವಾರ್ಷಿಕ ಸರ್ವ ಸಾಧಾರಣ ಸಭೆ

**ಸಿಹಿ ಕಹಿ ಸುದ್ದಿ**

**ಹುನಗುಂದ :** ಶ್ರೀ ಬಸವೇಶ್ವರ ಪತ್ತಿನ ಸಹಕಾರಿ ಸಂಘ ನಿಯಮಿತದ 22 ನೆಯ ವಾರ್ಷಿಕ ಸರ್ವ ಸಾಧಾರಣ ಸಭೆ ಹಾಗೂ ಎಸ್.ಎಸ್.ಎಲ್.ಸಿ ಮತ್ತು ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಸೆ. 24 ರಂದು ಮಂಗಳವಾರ 10 ಗಂಟೆಗೆ ಪಟ್ಟಣದ ಶ್ರೀ ಸಂಗಮೇಶ್ವರ ಕಲ್ಯಾಣ ಮಂಟಪದಲ್ಲಿ ಜರುಗಲಿದೆ ಎಂದು ಶ್ರೀ ಬಸವೇಶ್ವರ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷ ಬಸವರಾಜ ಹೊಸೂರ ಹೇಳಿದರು. ಪಟ್ಟಣದ ಶ್ರೀ ಬಸವೇಶ್ವರ ಪತ್ತಿನ ಸಹಕಾರಿ ಸಂಘದ ಕೇಂದ್ರ



ಕಚೇರಿಯಲ್ಲಿ ಕರೆದ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು, ಹುನಗುಂದ ಪಟ್ಟಣದ ಕೇಂದ್ರ ಕಚೇರಿ ಸೇರಿದಂತೆ 11 ಶಾಖೆಗಳ ಸದಸ್ಯರು,ಶೇರುದಾರರು, ಠೇವಣಿದಾರರು ಮಹಾ ಸಭೆಗೆ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಸಭೆಯನ್ನು ಯಶಸ್ವಿ ಗೊಳಿಸಬೇಕು. ಎಸ್.ಎಸ್.ಎಲ್.ಸಿ ಮತ್ತು ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ನಮ್ಮ ಸಂಘದ ಸದಸ್ಯರ ಪ್ರತಿಭಾನ್ವಿತ ಮಕ್ಕಳನ್ನು ಸತ್ಕರಿಸಿ ಗೌರವಿಸಲಾಗುವುದು ಎಂದರು.

ಸಂಘದ ಮುಖ್ಯ ಕಾರ್ಯನಿರ್ವಾಹಕ ಎಸ್.ಸಿ.ಚಳಗೇರಿ ಮಾತನಾಡಿ ಪ್ರಸಕ್ತ ವರ್ಷದಲ್ಲಿ 111.38 ಕೋಟಿ ದುಡಿಯುವ ಬಂಡವಾಳ ಹೊಂದಿದ್ದು.86.51 ಕೋಟಿ ಠೇವಣಿಯನ್ನು ಹೊಂದಿದ್ದು.2023–24 ನೇ ಸಾಲಿನಲ್ಲಿ 98.71 ಲಕ್ಷ ನಿವ್ವಳ ಲಾಭವನ್ನು ಗಳಿಸಿದೆ ಎಂದರು.

ಈ ಸಂದರ್ಭದಲ್ಲಿ ಸಂಘದ ಉಪಾಧ್ಯಕ್ಷ ಸಿದ್ದರಾಮೇಶ ಮೂಲಿಮನಿ, ನಿರ್ದೇಶಕರಾದ ಸಂಗಣ್ಣ ಹುನ್ನಳ್ಳಿ, ಸೋಮಶೇಖರ ತೋಟಗೇರ,ಸಂಗಪ್ಪ ಹೂಲಗೇರಿ, ಹಿರೇಣ್ಣಪ್ಪ ಆಲೂರ, ನಿಂಗಪ್ಪ ಲೋಕಪುರ, ಇಲಕಲ್ಲ ಶಾಖೆ ವ್ಯವಸ್ಥಾಪಕ ಎಸ್.ಎಸ್.ಹಳಪೇಟೆ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಮಲ್ಲಿಕಾರ್ಜುನ. ಎಂ.ಬಂಡರಗಲ್ಲ.ಹುನಗುಂದ**

# ನಗರ ಸ್ವಚ್ಛತೆಗೆ ಸಾರ್ವಜನಿಕರ ಸಹಕಾರ ಅಗತ್ಯ




**ರಬಕವಿ–ಬನಹಟ್ಟಿ :** ನಗರಸಭೆಯ ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಲಾಗುವುದು. ನಗರ ಸ್ವಚ್ಛತಾ ದೃಷ್ಟಿಯಿಂದ ಸಾರ್ವಜನಿಕರು ಕೂಡಾ ನಗರಸಭೆಯೊಂದಿಗೆ ಸಹಕರಿಸಬೇಕು ಎಂದು ಪೌರಾಯುಕ್ತ ಜಗದೀಶ ಈಟಿ ಹೇಳಿದರು.

ಅವರು ಮಂಗಳವಾರ ಬನಹಟ್ಟಿಯ ಶ್ರೀ ಕಾಡಸಿದ್ಧೇಶ್ವರ ದೇವಸ್ಥಾನ ಆವರಣದಲ್ಲಿ ಸ್ವಚ್ಛ ಭಾರತ ಮಿಷನ್ ಅಂಗವಾಗಿ ಸ್ವಚ್ಛತೆಯೇ ಸೇವೆ 2024 ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಸಪ್ಟೆಂಬರ್ 14 ರಿಂದ ಅಕ್ಟೋಬರ 2 ರ ವರೆಗೆ ವಿವಿಧ ಕಡೆ ಸ್ವಚ್ಛತಾ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು, ಇಂದು ಐತಿಹಾಸಿಕ ಬನಹಟ್ಟಿಯ ಶ್ರೀ ಕಾಡಸಿದ್ಧೇಶ್ವರ ದೇವಸ್ಥಾನದ ಆವರಣದ ಸ್ವಚ್ಛತಾ ಕಾರ್ಯವನ್ನು ಹಮ್ಮಿಕೊಂಡಿದ್ದೇವೆ. ಹಸಿ ಕಸ, ಒಣ ಕಸ ಬೇರೆ ಮಾಡಿ ನಗರಸಭೆಯಿಂದ ಬರುವ ಗಾಡಿಗಳಿಗೆ ಕೊಡಬೇಕು. ಒಟ್ಟಾರೆ ಸ್ವಚ್ಛತೆಯ ದೃಷ್ಠಿಯಿಂದ ನಗರಸಭೆ ಜೊತೆ ಕೈ ಜೋಡಿಸಬೇಕು ಎಂದರು.

ನಗರಸಭೆ ಸಿಬ್ಬಂದಿಗಳು ಸ್ವಚ್ಛತಾ ಕಾರ್ಯ ನಡೆಸಿದರು.

ಈ ಸಂದರ್ಭದಲ್ಲಿ ಹಿರಿಯ ಆರೋಗ್ಯ ನಿರೀಕ್ಷಕರಾದ ಶೋಭಾ ಹೊಸಮನಿ, ಮುಕೇಶ ಬನಹಟ್ಟಿ, ಮುತ್ತಪ್ಪ ಚೌಡಕಿ, ಭೀಮು ಬಾಡಗಿ, ಶಂಕರ ಮಾಂಗ, ಶಿವಪುತ್ರ ಮೂಡಲಗಿ, ಎಂ. ಬಿ. ಮೊಕಾಸಿ, ಕಿರಣ ಹಕ್ಕಲದಡ್ಡಿ, ರಾಮ ಬಸಪ್ಪಗೋಳ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಪೌರ ಕಾರ್ಮಿಕರು ನಿಜವಾದ ಕಾಯಕ ಯೋಗಿಗಳು – ಮಹೇಶ ನಿಡಶೇಸಿ



**ಸಿಹಿ ಕಹಿ ಸುದ್ದಿ,**

**ನರೇಗಲ್ :** ಮಳೆ, ಗಾಳಿ, ಚಳಿ, ಬಿಸಿಲು ಎನ್ನದೆ ಸದಾಕಾಲ ಸಾರ್ವಜನಿಕರ ಸೇವೆಯಲ್ಲಿ ತೊಡಗಿರುವ ಪೌರ ಕಾರ್ಮಿಕರು ನಿಜವಾದ ಕಾಯಕ ಯೋಗಿಗಳು. ಅವರನ್ನು, ಅವರ ಕಾರ್ಯವನ್ನು ಗೌರವಿಸುವ ಕಾರ್ಯವನ್ನು ಸಾರ್ವಜನಿಕರು ಮಾಡಬೇಕು ಎಂದು ನರೇಗಲ್ಲ ಪಟ್ಟಣ ಪಂಚಾಯತಿ ಮುಖ್ಯಾಧಿಕಾರಿ ಮಹೇಶ ನಿಡಶೇಸಿ ಹೇಳಿದರು.

ಕರ್ನಾಟಕ ರಾಜ್ಯ ಪೌರ ನೌಕರರ ಸಂಘ ಕಚೇರಿ ಚಿತ್ರದುರ್ಗ ಮತ್ತು ನರೇಗಲ್ಲ ಘಟಕ ಹಾಗೂ ನರೇಗಲ್ಲ ಪಟ್ಟಣ ಪಂಚಾಯತಿ ಇವರುಗಳ ಸಂಯುಕ್ತ ಆಶ್ರಯದಲ್ಲಿ ಸೋಮವಾರ ನಡೆದ 13 ನೆ. ವರ್ಷದ ಪೌರ ಕಾರ್ಮಿಕ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ನಿತ್ಯವೂ ಬೆಳಗಿನ ಜಾವ ಎದ್ದು ಪಟ್ಟಣದ ಪ್ರಮುಖ ಬೀದಿಗಳ ಕಸ ಗೂಡಿಸಿ, ಓಣಿಗಳಲ್ಲಿನ ಕಸ ತಗೆದು ಸಾರ್ವಜನಿಕರ ಆರೋಗ್ಯದ ಕಡೆಗೆ ಗಮನ ನೀಡುವ ಅವರ ಕಾರ್ಯ ಶ್ಲಾಘನೀಯವಾದುದು. ಕೊರೊನಾದಂತಹ ಸಂದಿಗ್ಧ ಸ್ಥಿತಿಯಲ್ಲಿಯೂ ಅವರು ಎದೆ ಗುಂದದೆ ತಮ್ಮ ಕಾರ್ಯವನ್ನು ನಿರ್ವಹಿಸಿ, ನಮ್ಮೆಲ್ಲರ ಜೀವ ಮತ್ತು ಜೀವನವನ್ನು ಕಾಪಾಡಿದ್ದಾರೆ. ಆದ್ದರಿಂದ ಈ ವೇದಿಕೆಯ ಮೂಲಕ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಎಂದು ನಿಡಶೇಸಿ ಹೇಳಿದರು.

ವಿಶೇಷ ಉಪನ್ಯಾಸ ನೀಡಿದ ಉಪನ್ಯಾಸಕ ಶಿವಾನಂದ ಗೋಗೇರಿ ಸಾರ್ವಜನಿಕರ ಆರೋಗ್ಯ ಕಾಪಾಡುವಲ್ಲಿ ಪೌರ ಕಾರ್ಮಿಕರ ಕಾಯಕ ದೊಡ್ಡದು. ಅವರು ಎಂದಿಗೂ ತಮ್ಮ ಕಾಯಕದ ಬಗ್ಗೆ ನಿರಾಸಕ್ತಿಯನ್ನು ತೋರಿಸಬಾರದು. ತಮ್ಮ ಕಾಯಕವನ್ನು ನಿಷ್ಠೆಯಿಂದ ಮಾಡುವ ಮೂಲಕ ಸಾರ್ವಜನಿಕರ ಮೆಚ್ಚುಗೆಗೆ ಪಾತ್ರರಾಗಬೇಕು. ಸಾರ್ವಜನಿಕರೂ ಸಹ ಪೌರ ಕಾರ್ಮಿಕರನ್ನು ವರ್ಷಕ್ಕೊಮ್ಮೆ ಯಾದರೂ ಗೌರವಿಸಿ ಸನ್ಮಾನಿಸುವಂತಹ ಕಾರ್ಯವನ್ನು ಮಾಡ ಬೇಕೆ–ಂದರು.

ವೇದಿಕೆಯ ಮೇಲೆ ಪಟ್ಟಣ ಪಂಚಾಯತಿ ಅಧ್ಯಕ್ಷ ಫಕೀರಪ್ಪ ಮಳ್ಳಿ, ಉಪಾಧ್ಯಕ್ಷ ಕುಮಾರಸ್ವಾಮಿ ಕೋರಧಾನ್ಯಮಠ, ಪೌರ ಕಾರ್ಮಿಕ ಸಂಘದ ಜಿಲ್ಲಾಧ್ಯಕ್ಷರಮೇಶ ಹಲಗಿಯವರ, ಪೌರ ಕಾರ್ಮಿಕ ಸಂಘದ ಉಪಾಧ್ಯಕ್ಷ ಶಂಕ್ರಪ್ಪ ದೊಡ್ಡಣ್ಣವರ, ಪಟ್ಟಣ ಪಂಚಾಯತಿ ಸದಸ್ಯರು, ಇನ್ನೂ ಮುಂತಾದವರು ಉಪಸ್ಥಿತರಿದ್ದರು. ನರೇಗಲ್ಲ ಘಟಕದ ಅಧ್ಯಕ್ಷ ನೀಲಪ್ಪ ಚಳ್ಳಮರದ ಅಧ್ಯಕ್ಷತೆ ವಹಿಸಿದ್ದರು. ಸಂಘದ ಕಾರ್ಯದರ್ಶಿ ಆರೀಫ್ಬೇಗ್ ಮಿರ್ಜಾ ನಿರೂಪಿಸಿ, ಸ್ವಾಗತಿಸಿದರು. ಎ.ಎಸ್. ಮೆಣಸಿಗಿ ವಂದಿಸಿದರು. ಸಮಾರಂಭದಲ್ಲಿ ಅನೇಕ ಪೌರ ಕಾರ್ಮಿಕರನ್ನು ಸನ್ಮಾನಿಸಲಾಯಿತು. ನರೇಗಲ್ಲದಲ್ಲಿ ನಡೆದ ಪೌರ ಕಾರ್ಮಿಕ ದಿನಾಚರಣೆಯನ್ನು ಪಟ್ಟಣ ಪಂಚಾಯತಿ ಅಧ್ಯಕ್ಷ ಫಕೀರಪ್ಪ ಮಳ್ಳಿ ಮತ್ತಿತರ ಗಣ್ಯರು ಉದ್ಘಾಟಿಸಿದರು.

**ಜಿಲ್ಲಾ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಶಿವಾನಂದ. ಎಫ್.ತೋಟಗುಂಟಿ.ಗದಗ**

# ಗಣಿತ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದ–ವಿದ್ಯಾರ್ಥಿನಿ ಶ್ರೀರಕ್ಷ



**ಬೆಳ್ಳಗಟ್ಟ :** ವಿಜಯನಗರ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಬೆಳ್ಳಗಟ್ಟ ಗ್ರಾಮ ಪಂಚಾಯಿತಿಯಲ್ಲಿ ಹಮ್ಮಿಕೊಂಡಿರುವ ಗಣಿತ ಆಂದೋಲನ ಕಾರ್ಯಕ್ರಮವನ್ನು ಏರ್ಪಡಿಸಲಾಯಿತು ಈ ಗಣಿತ ಆಂದೋಲನ ಸ್ಪರ್ಧೆಯಲ್ಲಿ ಕರಡಿಹಳ್ಳಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ 4 ನೇ ತರಗತಿ ವಿದ್ಯಾರ್ಥಿನಿ ಶ್ರೀರಕ್ಷ ಇವರು ಪ್ರಥಮ ಸ್ಥಾನ ಪಡೆದು ಕೊಂಡಿರುತ್ತಾರೆ.

ನಂತರ ಸಿ.ಆರ್.ಪಿ ವಿಶಾಲ ಅವರು ಮಾತನಾಡಿ ಈ ಗಣಿತ ಆಂದೋಲನ ಸ್ಪರ್ಧೆಯಲ್ಲಿ 4 ನೇ ತರಗತಿ ವಿದ್ಯಾರ್ಥಿನಿ ಶ್ರೀರಕ್ಷ ಅವರು ಗಣಿತ ಆಂದೋಲನ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದಿದ್ದು ನಮಗೂ ಮತ್ತು ನಮ್ಮ ಶಿಕ್ಷಕರಿಗೆ ಹೆಮ್ಮೆಯ ಸಂತಸವನ್ನುಂಟು ಮಾಡಿದೆ ಶ್ರೀರಕ್ಷರಂತೆ ನಮ್ಮ ವಿದ್ಯಾರ್ಥಿಗಳು ಉನ್ನತ ಮಟ್ಟಕ್ಕೆ ವಿದ್ಯಾಭ್ಯಾಸ ಕಲ್ಪಿಸಿ ಕೊಡಬೇಕೆಂದು ವಿದ್ಯಾರ್ಥಿಗಳಿಗೆ ತಿಳಿಸಿದರು.

ಈ ಗಣಿತ ಆಂದೋಲನ ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಗ್ರಾಮ ಪಂಚಾಯಿತಿ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಸರ್ವ ಸದಸ್ಯರು ಕರಡಿಹಳ್ಳಿ ಶಾಲೆಯ ಮುಖ್ಯ ಗುರುಗಳಾದ ನಾಗರಾಜ್ ಆಚಾರಿ ಸಹ ಶಿಕ್ಷಕಿ ಕೆ. ಸರೋಜಮ್ಮ ಅತಿಥಿ ಶಿಕ್ಷಕ ಸಣ್ಣ ಬೋರಯ್ಯ ಹಾಗೂ ಗ್ರಾಮ ಪಂಚಾಯಿತಿಗೆ ಸಂಬಂಧಪಟ್ಟ ಎಲ್ಲಾ ಶಾಲೆಯ ಮುಖ್ಯ ಗುರುಗಳು ಸಹ ಶಿಕ್ಷಕರು ಅತಿಥಿ ಶಿಕ್ಷಕರು ಹಾಗೂ ಪುಟಾಣಿ ವಿದ್ಯಾರ್ಥಿಗಳು ಇದ್ದರು.

**ಹೋಬಳಿ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಕೆ.ಎಸ್.ವೀರೇಶ್.ಕೆ.ಹೊಸಹಳ್ಳಿ.**

# ವಿಶ್ವದ ಪ್ರಥಮ ವಾಸ್ತು ಶಿಲ್ಪಿ ವಿಶ್ವಕರ್ಮರು

**ರಬಕವಿ–ಬನಹಟ್ಟಿ :** ವಿಶ್ವಕರ್ಮರನ್ನು ದೇವರುಗಳ ವಾಸ್ತು ಶಿಲ್ಪಿ ಎಂದು ಪರಿಗಣಿಸಲಾಗುತ್ತಿದೆ. ವಿಶ್ವಕರ್ಮರು ಪ್ರಪಂಚವನ್ನು, ಎಲ್ಲ ದೇವತೆಗಳನ್ನು ಮತ್ತು ಜೀವಿಗಳನ್ನು ಸೃಷ್ಠಿಸಿರುವುದರಿಂದ ಅವರು ವಿಶ್ವದ ಸೃಷ್ಠಿಕರ್ತರಾಗಿದ್ದಾರೆ ಎಂದು ಶಾಸಕ ಸಿದ್ದು ಸವದಿ ಹೇಳಿದರು.




ಅವರು ಮಂಗಳವಾರ ರಬಕವಿ–ಬನಹಟ್ಟಿ ತಹಶೀಲ್ದಾರ್ ಕಾರ್ಯಾಲಯದಲ್ಲಿ ವಿಶ್ವಕರ್ಮ ಮಹೋತ್ಸವದ ನಿಮಿತ್ಯ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿದರು. ವಿಶ್ವಕರ್ಮ ಸಮಾಜ ಬಾಂಧವರು ಕುಶಲ ಕರ್ಮಿಗಳಾಗಿದ್ದಾರೆ. ಅವರು ಶ್ರಮ ಜೀವಿಗಳಾಗಿದ್ದಾರೆ. ಅವರಿಂದಾಗಿ ಇಂದು ಅದ್ಭುತವಾದ ಕಲಾಕೃತಿಗಳನ್ನು ನಾವು ಕಾಣುತ್ತಿದ್ದೇವೆ. ವಿಶ್ವಕರ್ಮ ಸಮಾಜ ಬಾಂಧವರು ತಮ್ಮ ವೃತ್ತಿಯ ಜೊತೆಗೆ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವ ನಿಟ್ಟಿನಲ್ಲಿ ಗಮನ ನೀಡಬೇಕು. ವಿಶ್ವಕರ್ಮರ ಆದರ್ಶಗಳನ್ನು ನಾವು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಶಾಸಕ ಸಿದ್ದು ಸವದಿ ತಿಳಿಸಿದರು.

ಈ ಸಂದರ್ಭದಲ್ಲಿ ತಹಶೀಲ್ದಾರ ಗಿರೀಶ ಸ್ವಾದಿ, ಶಿರಸ್ತೆದಾರರಾದ ಶಾಂತಾ ಕೂಗಾಟೆ, ಕಂದಾಯ ನಿರೀಕ್ಷಕರಾದ ಪಿ. ಆರ್. ಮಠಪತಿ, ಸದಾಶಿವ ಕುಂಬಾರ, ಚೇತನ ಭಜಂತ್ರಿ, ರವಿ ಈಟಿ, ಸಮಾಜದ ಅಧ್ಯಕ್ಷರಾದ ಮೌನೇಶ ಬಡಿಗೇರ, ಗಣಪತಿ ಬಡಿಗೇರ, ಅಶೋಕ ಪತ್ತಾರ, ಕಲ್ಲಪ್ಪ ಪತ್ತಾರ, ರಾಮಚಂದ್ರ ಪತ್ತಾರ, ಮೋಹನ ಪತ್ತಾರ, ಅರವಿಂದ ಪತ್ತಾರ, ಚಿದಾನಂದ ಪತ್ತಾರ, ರಮೇಶ ಬಡಿಗೇರ, ರಾಜು ಬಡಿಗೇರ, ಕುಮಾರ ಪತ್ತಾರ, ಅನೀಲ ಬಡಿಗೇರ, ಮಲ್ಲಿಕಾರ್ಜುನ ಪತ್ತಾರ, ಈರಣ್ಣ ಸೋನಾರ, ದೀಪಕ ಆಸಂಗಿ, ರಾಘವೇಂದ್ರ ಸೋನಾರ, ಕಿರಣ ಆಸಂಗಿ, ಹನುಮಂತ ಪತ್ತಾರ, ರವೀಂದ್ರ ಪತ್ತಾರ, ಕಾಳಪ್ಪ ಪತ್ತಾರ, ನಾಗಲಿಂಗ ಪತ್ತಾರ, ಅಚ್ಯುತ ಪತ್ತಾರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ಕಾಂಗ್ರೆಸ್ ಪಕ್ಷದ ಪರವಾಗಿ ಬದ್ಧತೆ, ಶ್ರದ್ಧೆ ಮತ್ತು ಗೌರವ ಬೆಳೆಸಿಕೊಳ್ಳಬೇಕು: ದಯಾನಂದ ಪಾಟೀಲ



**ಮೂಡಲಗಿ :** ವ್ಯಕ್ತಿ ಪೂಜೆ ಬದಲಿಗೆ, ಕಾಂಗ್ರೆಸ್ ಪಕ್ಷದ ಪರವಾಗಿ ಬದ್ಧತೆ, ಶ್ರದ್ಧೆ ಮತ್ತು ಗೌರವ ಬೆಳೆಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು. ಪಕ್ಷ ಸಂಘಟನೆ ಕುರಿತಂತೆ ಬಿ ಎಲ್ ಎ ಪಾತ್ರ ತುಂಬಾ ಮಹತ್ವದ್ದಾಗಿದೆ ಎಂದು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿಗಳು ಮತ್ತು ಅರಭಾವಿ ಉಸ್ತುವಾರಿ ದಯಾನಂದ ಪಾಟೀಲ ಹೇಳಿದರು

ಕೌಜಲಗಿಯ ಅಂಬೇಡ್ಕರ್ ಭವನದಲ್ಲಿ ನಡೆದ ಅರಭಾವಿ ಮತ್ತು ಕೌಜಲಗಿ ಬ್ಲಾಕ್ ಕಾಂಗ್ರೆಸ್ ಸಮಿತಿಗಳ ಪದಾಧಿಕಾರಿಗಳ ಸಭೆ ಆಗಮಿಸಿದ್ದ ಅವರು ಸಸಿಗೆ ನೀರು ಉಣಿಸುವ ಮೂಲಕ ಸಭೆಯನ್ನು ಉದ್ಘಾಟಿಸಿ ಮಾತನಾಡಿದರು.ವಿಧಾನ ಸಭಾ ಮತ್ತು ಲೋಕಸಭಾ ಚುನಾವಣೆ ನಡೆದ ನಂತರ ಅರಭಾವಿ ಮತ್ತು ಕೌಜಲಗಿ ಬ್ಲಾಕ್ ಅಧ್ಯಕ್ಷರು ನಡೆಸಿದ ಕೆಲಸ ಕಾರ್ಯಗಳ ಕುರಿತು ಅವರು ತಪಾಸಣೆ ನಡೆಸಿ ಮುಂಚೂಣಿ ಘಟಕಗಳ ಪದಾಧಿಕಾರಿಗಳ ಪಟ್ಟಿಯನ್ನು ಪಡೆದುಕೊಂಢರು.

ಅಧ್ಯಕ್ಷತೆ ವಹಿಸಿದ ಕೆಪಿಸಿಸಿ ಸದಸ್ಯ ಅರವಿಂದ ದಳವಾಯಿ ಮಾತನಾಡಿ, ಅರಭಾವಿ ಒಂದು ಕಾಲಕ್ಕೆ ಕಾಂಗ್ರೆಸ್ ಪಕ್ಷದ ಭದ್ರ ಕೋಟೆಯಾಗಿತ್ತು ಅರಭಾವಿಯಲ್ಲಿ ಚುನಾವಣೆಯಲ್ಲಿ ಬಿಜೆಪಿಯವರು ಕೋಟಿಗಟ್ಟಲೆ ಹಣ ಹರಿಸುತ್ತಿದ್ದು ಚುನಾವಣೆ ಮಾಡುವದೇ ಕಷ್ಟಸಾಧ್ಯವಾಗಿದೆ ಎಂದರು. ಅಲ್ಲದೇ ಕೆಲವರು ಚುನಾವಣೆ ಬಂದಾಗ ಮಾತ್ರ ಕಾಂಗ್ರೆಸಿಗರು ಎಂದು ಹೇಳಿಕೊಳ್ಳುವವರು ಟಿಕೇಟ್ ದೊರೆಯುವುದೇ ಹೋದಾಗ ಕಾಂಗ್ರೆಸ್ ಪಕ್ಷಕ್ಕೆ ಚೂರಿ ಹಾಕುತ್ತಾರೆ. ಇಂತಹವರಿಂದಲೇ ಕಳೆದ ಎರಡು ಚುನಾವಣೆಗಳಲ್ಲಿ ಪಕ್ಷಕ್ಕೆ ಹಾನಿಯಾಗಿದೆ ಕಾಂಗ್ರೆಸ್ ಕಾರ್ಯಕರ್ತರು ಸೈದ್ಧಾಂತಿಕ ಬದ್ಧತೆ ಬೆಳೆಸಿಕೊಂಡರೆ ಮಾತ್ರ ಚುಣಾವಣೆ ಗೆಲ್ಲಲು ಸಾಧ್ಯವೆಂದು ಹೇಳಿದರು.ಹಿರಿಯ ಕಾಂಗ್ರೆಸ್ ನಾಯಕ ವಿ ಪಿ ನಾಯಕ ಮಾತನಾಡಿದರು.ಸಭೆಯಲ್ಲಿ ಪಕ್ಷದ ಹಿರಿಯರಾದ ಸುಭಾಸ ಸೋನವಾಲಕರ, ಮೂಡಲಗಿ ತಾಲೂಕು ಗ್ಯಾರಂಟಿ ಸಮಿತಿ ಅಧ್ಯಕ್ಷ ಅನಿಲ ದಳವಾಯಿ, ಮಾಳಪ್ಪ ಬಿದರಿ, ರಾಜೇಶ್, ಮೀರಾಸಾಬ ಅನ್ಸಾರಿ, ರೇವಣ್ಣ ಮುನ್ಯಾಳ, ಇಮಾಮಸಾಬ ಹುನ್ನೂರ, ರಮೇಶ ಬೆಳಕೂಡ, ವಿರೂಪಾಕ್ಷ ಮುಗಳಖೋಡ, ಮತ್ತು ಕೌಜಲಗಿ ಬ್ಲಾಕ್ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಸುರೇಶ ಮಗದುಮ್, ಪ್ರಕಾಶ ಅರಳಿ ಇದ್ದರು.

## ವಿಜಯ ಸಹಕಾರಿಗೆ 7.95ಕೋಟಿ ಲಾಭ । ಶೇ.22ರಷ್ಟು ಲಾಭಾಂಶ ಹಂಚಿಕೆ

# ನಿರಾಣಿ ಪರಿವಾರ ಜೊತೆಗಿದೆ ರೈತ ಪರಿವಾರ: ನಿರಾಣಿ

**ಜಮಖಂಡಿ :** 44ಸಾವಿರ ಕೋಟಿ ವಾರ್ಷಿಕ ವಹಿವಾಟು ನಡೆಸುವ ಮೂಲಕ ದಕ್ಷಿಣ ಭಾರತದಲ್ಲಿ ಹೊಸದೊಂದು ದಾಖಲೆಯನ್ನು ವಿಜಯ ಸಹಕಾರಿ ಸಂಸ್ಥೆ ಬರೆದಿದೆ. ನಿರಂತರವಾಗಿ ನಿರಾಣಿ ಪರಿವಾರದ ಜೊತೆಗೆ ರೈತ ಪರಿವಾರ ಇದೆ. 7.95 ಕೋಟಿ ಲಾಭದೊಂದಿಗೆ ಸಂಸ್ಥೆ ಶೇರುದಾರರಿಗೆ ಶೇ.22ರಷ್ಟು ಲಾಭಾಂಶ ನೀಡಲಾಗುತ್ತಿದೆ ಎಂದು ಮಾಜಿ ಸಚಿವ ಮುರಗೇಶ ನಿರಾಣಿ ಹೇಳಿದರು.

ತಾಲೂಕಿನ ಹಿಪ್ಪರಗಿಯ ಸಾಯಿಪ್ರೀಯಾ ಸಕ್ಕರೆ ಕಾರಖಾನೆ ಆವರಣದಲ್ಲಿ ನಡೆದ ನಿರಾಣಿ ಸಮೂಹದ ವಿಜಯ ಎಂ.ಆರ್. ಎನ್.ಸೌಹಾರ್ದ ಸಹಕಾರಿ, ವಿಶಾಲ ಎಂ.ಆರ್.ಎನ್.ಸೌಹಾರ್ದ ಸಹಕಾರಿ, ಪ್ರಜ್ವಲ ವಿವಿದೋದ್ದೇಶಗಳ ಸಹಕಾರಿ ಹಾಗೂ ಎಂ.ಆರ್.ಎನ್. (ನಿರಾಣಿ) ಫೌಂಡೇಶನ್ ಸಂಸ್ಥೆಗಳ ವಾರ್ಷಿಕೋತ್ಸವ ಸಮಾರಂಭದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ನಿರಾಣಿ ಉದ್ಯಮ ಸಮೂಹ ಸಂಸ್ಥೆಯ ವಿಜಯ ಸೌಹಾರ್ದ ಕ್ರೆಡಿಟ್ ಸಹಕಾರಿಯು ಆಧುನಿಕ ತಂತ್ರಜ್ಞಾನ, ಹೊಸ ಯುಗದ ಬ್ಯಾಂಕಿಂಗ್ ವ್ಯವಸ್ಥೆ, ನಿಖರ ಮಾಹಿತಿ, ತ್ವರಿತ ಸೇವೆಯೊಂದಿಗೆ ಆರ್ಥಿಕ ವ್ಯವಹಾರ ಗೌಪ್ಯತೆ ಮತ್ತು ಆರ್ಥಿಕ ಸುರಕ್ಷಾ ನೀತಿಗಳನ್ನು ರಾಷ್ಟ್ರೀಕೃತ ಬ್ಯಾಂಕುಗಳನ್ನು ಮೀರಿಸುವಂತೆ ಸೇವೆ ನೀಡುವ ಮೂಲಕ ಗ್ರಾಹಕರ ವಿಶ್ವಾಸಾರ್ಹ ಸಂಸ್ಥೆಯಾಗಿ ಹೊರಹೊಮ್ಮಿದೆ ಎಂದರು.

ಸನ್ 2023-24ನೇ ಸಾಲಿನಲ್ಲಿ ವಿಜಯ ಸೌಹಾರ್ದ ಸಹಕಾರಿ 44 ಸಾವಿರ ಕೋಟಿ ಹಣಕಾಸಿನ ವಹಿವಾಟು ಮೂಲಕ



ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ದಕ್ಷಿಣ ಭಾರತದಲ್ಲಿ ವಿನೂತನ ದಾಖಲೆ ಬರೆದಿದೆ. 18 ವರ್ಷಗಳ ಹಿಂದೆ ಮುಧೋಳದಲ್ಲಿ ಪ್ರಾರಂಭವಾದ ಸಹಕಾರಿ ಸಂಸ್ಥೆ ಹೆಮ್ಮರವಾಗಿ ಬೆಳೆದಿದ್ದು, 1,950 ಕೋಟಿ ಠೇವಣಿ ಸಂಗ್ರಹಿಸಿ 1,846 ಕೋಟಿ ಸಾಲ ನೀಡಿದ್ದು, ವರ್ಷಾಂತ್ಯಕ್ಕೆ 7.95 ಕೋಟಿ ಲಾಭದೊಂದಿಗೆ ಶೇ.22ರಷ್ಟು ಲಾಭಾಂಶ ನೀಡಲಾಗುತ್ತಿದೆ. ಕರ್ನಾಟಕ ರಾಜ್ಯಾದ್ಯಂತ 65ಶಾಖೆಗಳಿದ್ದು,ಶೀಘ್ರದಲ್ಲಿ35ಹೊಸದಾಗಿ ಶಾಖೆಗಳನ್ನು ಆರಂಭಿಸಲಾಗುವದು.

ನಿರಾಣಿ ಉದ್ಯಮ ಸಮೂಹವು ಪ್ರತಿ ರೈತನ ಆರ್ಥಿಕ ಉನ್ನತಿಗೆ ಹಾಗೂ ಜೀವನ ಮಟ್ಟ ಸುಧಾರಣೆಗೆ ಅವಶ್ಯಕ ನೀತಿಗಳೊಂದಿಗೆ ಹೆಜ್ಜೆ ಇಡುತ್ತಿದ್ದು, ರೈತರು ಶಕ್ತಿಶಾಲಿಯಾದರೆ ಮಾತ್ರ ಆತ್ಮನಿರ್ಭರ ಭಾರತ ನಿರ್ಮಾಣ ಸಾಧ್ಯ.ರೈತರಕಲ್ಯಾಣದವಿಷಯದಲ್ಲಿದೇಶದ ಯಾವುದೆ ಮೂಲೆಯಲ್ಲಿ ಕೃಷಿ ಉದ್ಯಮಗಳ ವಿಕಾಸಕ್ಕೆ ನಿರಾಣಿ ಸಮೂಹ ಬದ್ಧವಾಗಿದೆ. ಕೃಷಿ ಉದ್ಯಮಗಳು ರೈತನ ಆತ್ಮದಂತಿದ್ದು, ಎಂದಿಗೂ ಸ್ಥಗಿತಗೊಳಬಾರದೆಂಬ ಆಶಯದಿಂದ ನಿರಾಣಿ ಸಮೂಹ ಬಿಹಾರದ ರೀಗಾ ಶುಗರ್ಸ್ ಕಾರ್ಖಾನೆಯನ್ನು ಪುನರುಜ್ಜೀವನಗೊಳಿಸುತ್ತಿದೆ. ನಿರಾಣಿ ಸಮೂಹ ದೇಶ ವ್ಯಾಪಿ ಕಾರ್ಯಾಚರಣೆಯ ಸಾಮರ್ಥ್ಯ ಲಭಿಸಿದ್ದು ನಮ್ಮ ಭಾಗದ ರೈತರ ಬೆಂಬಲ ಅಭಿಮಾನದಿಂದ ಸಾಧ್ಯ ಆಗಿದೆ. ನಿರಾಣಿ ಉದ್ಯಮದ ಯಶಸ್ಸಿನ ಹಿಂದೆ ನಮ್ಮ ರೈತರ ಪರಿಶ್ರಮ ಅಡಗಿದೆ ಎಂದರು.

ಎಂ.ಆರ್.ಎನ್ ಸಮೂಹದ ಕಾರ್ಯನಿರ್ವಾಹಕನಿರ್ದೇಶಕಸಂಗಮೇಶ ನಿರಾಣಿ ಪ್ರಾಸ್ತಾವಿಕವಾಗಿ ಮಾತನಾಡಿ ದರು. ವೇದಿಕೆಯಲ್ಲಿ ವಿಧಾನ ಪರಿಷತ ಸದಸ್ಯ ಹಣಮಂತನಿರಾಣಿ,ಪತ್ರಿಕೆಸಂಪಾದಕಪ್ರಸನ್ನ ಕರ್ಪೂರ, ಸಿದ್ದು ಕೊಣ್ಣೂರ, ಪುಂಡಲೀಕ ಪಾಲಭಾವಿ, ಈಶ್ವರ ಕರಸನ್ನವರ, ಪಿ.ಎನ್.ಪಾಟೀಲ, ಸುಶೀಲಕುಮಾರ ಬೆಳಗಲಿ, ರಾಹುಲ ಕಲೂತಿ, ಪಿ.ಆರ್. ಗೌಡರ, ಸವಿತಾ ಯಡೊಳ್ಳಿ, ಮಾಮೂನ ಪಾರತನಳ್ಳಿ, ಎ.ಬಿ.ಮನಗೂಳಿ, ಸೋಮು ಗೋಸಾರ, ಎಂ.ಎಂ.ಪೂಜಾರ, ಮೋಹನ ಜಾಧವ, ಸುರೇಶ ಚಿಂಡಕ, ಸುರೇಶಗೌಡ ಪಾಟೀಲ, ಪ್ರಕಾಶ ಕಾಳೆ ಹೊಳೆಬಸು ಬಶೆಟ್ಟಿ, ಡಾ.ವಿಜಯಲಕ್ಷ್ಮೀ ತುಂಗಳ, ವಿಜಯ ಸೌಹಾರ್ದ ಪ್ರಧಾನ ವ್ಯವಸ್ಥಾಪಕ ಎಂ.ಎಚ್. ಪತ್ತೇನ್ನವರ, ವಿಶಾಲ ಸೌಹಾರ್ದ ಪ್ರಧಾನ ವ್ಯವಸ್ಥಾಪಕ ಬಿ.ಜಿ.ಹಿಪ್ಪರಗಿ, ಸಾಯಿಪ್ರಿಯಾ ಶುಗರ್ಸ್ ಕಬ್ಬು ವಿಭಾಗದ ಪ್ರಧಾನ ವ್ಯವಸ್ಥಾಪಕ ಎನ್.ಸಿ..ಚೌಗಲಾ ಸಹಿತ ಹಲವರು ಇದ್ದರು.

### ವಿಶ್ವದಲ್ಲಿ ಪ್ರಥಮಸ್ಥಾನ ಪಡೆಯಲಿದೆ

**ಇಥೆನಾಲ್ ಉತ್ಪಾದನೆಯಲ್ಲಿ ನಿರಾಣಿ ಸಮೂಹ ಸಂಸ್ಥೆ ಉದ್ದಿಮೆ ಪ್ರಥಮ ಸ್ಥಾನ ಪಡೆಯಲಿದೆ. ಕೇಂದ್ರ ಗೃಹಸಚಿವ ಅಮಿತಶಾ ಮನವಿ ಮೇರೆಗೆ ಬಿಹಾರದಲ್ಲಿ ರಿಲೇ ಸಕ್ಕರೆ ಕಾರ್ಖಾನೆ ಪುನರುಜ್ಜೀವನಗೊಳಿಸುವ ಮೂಲಕ ಬರತಕ್ಕ ತಿಂಗಳಲ್ಲಿ ನಮ್ಮ ಸಂಸ್ಥೆಯ 10ನೇ ಸಕ್ಕರೆ ಕಾರಖಾನೆ ಆರಂಭಗೊಳ್ಳಲಿದೆ. 10 ಸಕ್ಕರೆ ಕಾರಖಾನೆಗಳ ಮೂಲಕ ಪ್ರತಿ ನಿತ್ಯ 1 ಲಕ್ಷ ಟನ್ ರೈತರ ಕಬ್ಬು ನುರಿಸಲಿದೆ. ಅಂದಾಜು 1 ಲಕ್ಷ ಎಕರೆ ರೈತರ ಸವಳು-ಜವಳು ಜಮೀನು ನಿವಾಣೆಗೆಗಾಗಿ ಕೇಂದ್ರ ಸಚಿವರೊಂದಿಗೆ ನಮ್ಮ ಭಾಗದ ರೈತರ ನಿಯೋಗ ತೆರಳಲಿದೆ. ಕಾಳಿನದಿಯಲ್ಲಿ ಲಭ್ಯವಿರುವ 140 ಟಿಎಂಸಿ ನೀರನ್ನು ಲಿಫ್ಟ್ ಮೂಲಕ ಘಟಪ್ರಭ ಮತ್ತು ಮಲಪ್ರಭ ನದಿಗಳಿಗೆ ಹರಿಸುವ ಮಹತ್ತರ ಯೋಜನೆ ಕೇಂದ್ರ ಸರಕಾರ ಗ್ರೀನ್ ಸಿಗ್ನಲ್ ನೀಡಿರುವ ಹಿನ್ನಲೆಯಲ್ಲಿ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಗಮನ ಸೆಳೆಯುವದು.**

**। ಮುರಗೇಶ ನಿರಾಣಿ ಮಾಜಿ ಸಚಿವರು, ಬೃಹತ್ ಉದ್ದಿಮೆದಾರರು.**

## ಕೊಡತೆ ಅವರಿಗೆ ಜಿಲ್ಲಾ ಉತ್ತಮ ಶಿಕ್ಷಕ ಪ್ರಶಸ್ತಿ



**ಮೂಡಲಗಿ :** ಜಿಲ್ಲಾ ಪಂಚಾಯತ್ ಬೆಳಗಾವಿ, ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆ ಉಪನಿರ್ದೇಶಕರ ಕಚೇರಿ ಚಿಕ್ಕೋಡಿ ಇವರು ಸೆ. 05 ರಂದು ಚಿಕ್ಕೋಡಿಯಲ್ಲಿ ನೆರವೇರಿಸಿದ ಶಿಕ್ಷಕರ ದಿನಾಚರಣೆ ಸಂದರ್ಭದಲ್ಲಿ ಮೂಡಲಗಿ ವಲಯದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಖಾನಟ್ಟಿ ಶಾಲೆಯ ಪ್ರಧಾನ ಗುರು ಚಂದ್ರಕಾಂತ್ ಕಲ್ಲಪ್ಪ ಕೊಡತೆ ಇವರಿಗೆ ಜಿಲ್ಲಾ ಉತ್ತಮ ಶಿಕ್ಷಕ ಪ್ರಶಸ್ತಿ ಲಭಿಸಿದೆ. ಮಾನ್ಯ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಕಾರ್ಯಾಲಯದ ಸಿಬ್ಬಂದಿ, ಕ.ರಾ.ಪ್ರಾ.ಶಾ.ಶಿ. ಸಂಘ ತಾಲೂಕು ಘಟಕ ಮೂಡಲಗಿಯ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಹಾಗೂ ಖಾನಟ್ಟಿ ಶಾಲೆ ಎಸ್ ಡಿ ಎಮ್ ಸಿ ಅಧ್ಯಕ್ಷರು ಮತ್ತು ಪದಾಧಿಕಾರಿಗಳು, ಗ್ರಾಮದ ಎಲ್ಲ ಗುರು ಹಿರಿಯರು ಹಾಗೂ ಶಾಲೆಯ ಎಲ್ಲಾ ಸಿಬ್ಬಂದಿ ವರ್ಗದವರು ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

# ಕರಾಟೆ ವಿದ್ಯಾರ್ಥಿಗಳಿಂದ ಪ್ರಜಾಪ್ರಭುತ್ವ ದಿನ ಆಚರಣೆ

**ಬಾಗಲಕೋಟೆ :** ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಪ್ರಯುಕ್ತ ರಾಜ್ಯದ ಪ್ರತಿಷ್ಠಿತ ಕರಾಟೆ ತರಬೇತಿ ಕೇಂದ್ರ ರಾಠೋಡ ಮಾರ್ಷಲ್ ಆರ್ಟ್ಸ್ & ಸ್ಕಿಲ್ ಯೂನಿಯನ್ ವತಿಯಿಂದ ನೂರಾರು ಕರಾಟೆ ಪಟುಗಳು ರವಿವಾರ ಬೆಳಗಿನ ಜಾವದ ಕರಾಟೆ ತರಬೇತಿಯನ್ನು ಮುಗಿಸಿ ತದನಂತರದಲ್ಲಿ ಬಾಗಲಕೋಟೆ ಜಿಲ್ಲಾಡಳಿತದ ವತಿಯಿಂದ ನಡೆದ ದಾಖಲೆಯ ಮಾನವ ಸರಪಳಿ ನಿರ್ಮಾಣ ಮತ್ತು ಸಂವಿಧಾನ ಪೀಠಿಕೆ ಓದುವ ಕಾರ್ಯಕ್ರಮದಲ್ಲಿ ಭಾಗವಹಿಸಿದರು.



ಜಿಲ್ಲಾಡಳಿತ ಭವನದ ಮುಂದೆ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಉಸ್ತುವಾರಿ ಸಚಿವ ಆರ್.ಬಿ ತಿಮ್ಮಾಪುರ, ಸಂಸದ ಪಿ.ಸಿ ಗದ್ದಿಗೌಡರ, ಶಾಸಕರಾದ ಎಚ್.ವೈ ಮೇಟಿ, ಬಿ.ಬಿ ಚಿಮ್ಮನಕಟ್ಟಿ, ವಿಪ ಸದಸ್ಯ ಪಿ.ಎಚ್.ಪೂಜಾರ ಹಾಗೂ ಜಿಲ್ಲಾಧಿಕಾರಿಗಳು ವಿವಿಧ ಇಲಾಖೆಯ ಅಧಿಕಾರಿಗಳು ಹಾಜರಿದ್ದ ಕಾರ್ಯಕ್ರಮದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ರವರ ಪುತ್ಥಳಿಗೆ ಪುಷ್ಪನಮನ ಸಲ್ಲಿಸಿದ ವಿದ್ಯಾರ್ಥಿಗಳು ಸಂವಿಧಾನ ಮತ್ತು ಪ್ರಜಾಪ್ರಭುತ್ವದ ಜೈಕಾರಗಳನ್ನು ಕೂಗಿದರು. ಈ ಸಂದರ್ಭದಲ್ಲಿ ಕರಾಟೆ ಚೀಫ್ ಕೋಚ್ ಎಸ್.ಆರ್. ರಾಠೋಡ ಸೇರಿದಂತೆ ಬ್ಲ್ಯಾಕ್‌ಬೆಲ್ಟ್ ತರಬೇತುದಾರರು, ಕರಾಟೆ ಸಂಸ್ಥೆಯ ಪದಾಧಿಕಾರಿಗಳು, ವಿದ್ಯಾರ್ಥಿಗಳು ಹಾಜರಿದ್ದರು.

# ಜೋಕಮಾರನ ಏಳು ದಿನದ ಹುಟ್ಟು-ಸಾವು ಆಚರಣೆ



**ಜಮಖಂಡಿ :** ಭಾರತೀಯ ಸಂಸ್ಕೃತಿ ಆಚರಣೆ ದೇಶವಾಗಿದ್ದು, ರೈತರೇ ದೇಶದ ಬಹುಸುಖ್ಯಾತ ಜನರು, ಹೀಗಾಗಿ ರೈತರು ಮಣ್ಣಿನೊಂದಿಗೆ ವಿಶೇಷತೆ ಹೊಂದಿದ್ದು, ಜೋಕುಮಾರನು ಒಂದು ರೀತಿಯಲ್ಲಿ ಮಣ್ಣಿನ ಮಗನಾಗಿದ್ದಾನೆ. ಮಣ್ಣಿನಿ ಮೂರ್ತಿಯನ್ನು ಮೆರವಣಿಗೆ ಮೂಲಕ ಭೂಮಿಯಲ್ಲಿ ಸಿಂಪಡಿಸಿದರೆ. ಚೆನ್ನಾಗಿ ಫಸಲು ಬರುತ್ತದೆ ರೈತರ ನಂಬಿಕೆಯಿದೆ.

ಜೋಕುಮಾರನು ಫಲ ಸಂಸ್ಕೃತಿ ಪ್ರತೀಕನಾಗಿದ್ದಾನೆ. ಆತನ ಕುರಿತು ಅನೇಕ ಅಶ್ಲೀಲಪದಗಳು ಬೈಗುಳಗಳು ಜನರ ನಾಲಿಗೆಯ ಮೇಲೆ ನಲಿದಾಡುತ್ತಿವೆ. ಆತನ ಪ್ರಸಾದವಾಗಿರುವ ಚಿಗುರಕ್ಕೆ ವಿಶೇಷ ಶಕ್ತಿಯಿದೆ. ಉತ್ತರ ಕರ್ನಾಟಕದ ಪ್ರತಿ ಹಳ್ಳಿಗಳಲ್ಲಿ ಜೋಕುಮಾರನ ಪದ್ಧತಿ ರೂಢಿಯಲ್ಲಿದೆ. ಈ ಕುರಿತು ವಿಶೇಷ ಅಧ್ಯಯನ ನಡೆಯಬೇಕಾಗಿದ್ದು, ಆತನ ಕುರಿತಾಗಿರುವ ಕಥೆ. ಹಾಡು, ಗಾದೆ ಮಾತುಗಳು, ಬೈಗುಳಗಳು ಹಾಗೂ ನಾಣ್ನುಡಿಗಳನ್ನು ಸಂಗ್ರಹಿಸಿದರೇ ಇನ್ನಷ್ಟು ಹೊಸ ಅಂಶಗಳು ಬೆಳಕಿಗೆ ಬರಲಿವೆ.

ಮೆರವಣಿಗೆ ಸಂದರ್ಭದಲ್ಲಿ ಚಿಕ್ಕಮಕ್ಕಳ ಕಣ್ಣಿನಲ್ಲಿ ಆತನ ಎಡೆಯಲ್ಲಿರುವ ಬೆಣ್ಣೆಂ ಹಚ್ಚಿದರೆ ಕಣ್ಣುಬೇನೆ ಬರುವದಿಲ್ಲ ಜನರಲ್ಲಿ ನಂಬಿಕೆಯಿದೆ. ಅಡ್ಡಡ್ಡ ಮಳಿ ಬಂದ, ದೊಡ್ಡದೊಡ್ಡ ಕೆರೆ ತುಂಬಿ ಗೊಡ್ಡುಗಳೆಲ್ಲ ಹೈನಾಗಿ ಜೋಕುಮಾರ... ಮಡಿವಾಳರ ಮನೆ ಹೊಕ್ಕಾನೆ ಜೋಕುಮಾರ... ಮುಡಿತುಂಬ ಹೂ ಮುಡಿದಂತ ಚಲುವಿ ತನ್ನ ಮಡದಿಯಾಗೆಂದ ಸುಕುಮಾರ ಎಂದು ವಿವಿಧ ಜನಪದ ಶೈಲಿಯಲ್ಲಿ ಹಾಡುವುದನ್ನು ಹೇಳುತ್ತ ಗಂಗಾಮತ ಸಮಾಜದ ತಳವಾರ ಮಹಿಳೆಯರು ಬೇವಿನ ಎಲೆಯಲ್ಲಿ ಬಿದಿರು ಬುಟ್ಟಿಯಲ್ಲಿ ಬಾಯಿಗೆ ಬೆಣ್ಣೆ, ಹಣೆಗೆ ಕುಂಕುಮ ಹಚ್ಚಿ ಸಂಗರಿಸಿ ಜೋಕುಮಾರ ಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸುತ್ತಿದ್ದಾರೆ.

ಗಣೇಶ ಭಾದ್ರಪದ ಚೌತಿ ನಕ್ಷತ್ರದಲ್ಲಿ ಪ್ರತಿಷ್ಠಾಪನೆಗೊಳ್ಳುವ ಗಣಪತಿ ಪ್ರತಿಷ್ಠಾಪನೆಯ 5ನೇ ದಿನಕ್ಕೆ ಜೋಕುಮಾರ ಬರುತ್ತಾನೆ. ಗಣಪತಿ ಭೂಲೋಕಕ್ಕೆ ಬಂದಾಗ ಜನತೆ ತಿಂದುಂಡು ಸೌಖ್ಯದಿಂದ ಇದ್ದಾರೆ ಎಂಬ ಸಂದೇಶವನ್ನು ಶಿವನಿಗೆ ತಿಳಿಸುತ್ತಾನೆ. ಆದರೆ ಜನತೆ ದಾರಿದ್ರ, ಬಡತನದಿಂದ ಬಳಲುತ್ತಿರುವುದು ಶಿವನಿಗೆ ಸತ್ಯ ಸಂಗತಿ ಅರಿವು ಆಗುವುದಿಲ್ಲ. ನಂತರ ಜೋಕುಮಾರ ಭೂಲೋಕಕ್ಕೆ ಬಂದಾಗ ಅಲ್ಲಿಯ ವಸ್ತುಸ್ಥಿತಿ ಅರ್ಥವಾಗುತ್ತದೆ. ಜನರ ಬಡತನ. ದಾರಿದ್ರವನ್ನು ಶಿವನಿಗೆ ನಿವೇದಿಸುತ್ತಾನೆ. ಶಿವನು ಕರುಣೆ ತೋರಿ ಭೂಲೋಕದ ಜನರಿಗೆ ಜೋಕುಮಾರ ಮಳೆ ಸುರಿಸುತ್ತಾನೆ. ರೈತರಿಗೆ ಹರ್ಷ ತರುವ ಮೂಲಕ ಜನತೆ ಏನು ಕೊಡದಿದ್ದರೂ ಜೋಕುಮಾರನು ಮಳೆ ನೀಡುತ್ತಾನೆ ನಂಬಿಕೆಯಿದೆ. ಗ್ರಾಮೀಣಭಾಗದಲ್ಲಿ ಜೋಕ್ಯಾನ ಹುಣ್ಣಿವೆಂದು ಆಚರಿಸುತ್ತಾರೆ. ಗಣೇಶ ಶಿವನಿಗೆ ತಪ್ಪು ಸಂದೇಶ ನೀಡಿರುವದರಿಂದ ಜೋಕುಮಾರ ಹಾಗೂ ಗಣೇಶನ ನಡುವೆಭಿನ್ನಾಪ್ರಾಯವಿದೆ. ಅದಕ್ಕಾಗಿ ಇಬ್ಬರು ಎದುರು ಬದುರು ಭೇಟಿಯಾಗುವುದಿಲ್ಲ ಜನರೂಢಿಯಲ್ಲಿದೆ.

ಏಳು ದಿನವರೆಗೆ ಜೀವಿಸುವ ಜೋಕಮಾರ ಪಡೆಗಳಲ್ಲಿ ಜೀವಬೀಡುತ್ತಾನೆ. ಏಳು ದಿನಗಳವರೆಗೆ ಹಳ್ಳ, ಕೆರೆಗಳಲ್ಲಿ ಬಟ್ಟೆತೊಳೆಯುವುದಿಲ್ಲ 7 ದಿನಗಳವರೆಗೆ ಯಾವ ಶುಭ ಕಾರ್ಯ ನಡೆಯುವದಿಲ್ಲ ಎಂದು ಜೋಕುಮಾರನ ಹೊತ್ತ ಮಹಿಳೆಯರು ಹೇಳುತ್ತಾರೆ. ದಣ್ಣಾದೇವಿಯ ಮಗನೆನಿಸಿರುವ ಜೋಕುಮಾರ ಪರಂಪರೆ, ಸಂಪ್ರದಾಯ ಹೊಂದಿದ್ದರೂ ಈತನಿಗೆ ನಿರ್ದಿಷ್ಟ ದೇವಾಲಯವಿಲ್ಲ. ಮಧ್ಯದಲ್ಲಿಯೇ ಹುಟ್ಟಿಬಂದು ಮದ್ಯದಲ್ಲಿ ಪ್ರಾಣ ಬಿಡುವ ಜೋಕುಮಾರನ ಕುರಿತು ಜನಪದ ಕಥೆಗಳಿವೆ.

**– ಮಲ್ಲೇಶ ರಾ. ಆಳಗಿ, ಜಮಖಂಡಿ**

# ಸಾಮಾಜಿಕ ನ್ಯಾಯಕ್ಕಾಗಿ ಸಿದ್ದರಾಮಯ್ಯ ಶ್ರಮಿಸುತ್ತಿದ್ದಾರೆ

**ಜಮಖಂಡಿ :** ರಾಜ್ಯದ ಮುಖ್ಯಮಂತ್ರಿ ಸಿದ್ಧರಾಮಯ್ಯನವರಿಗೆ ತೊಂದರೆ ಕೊಡುವ ಉದ್ದೇಶದಿಂದ ವಿರೋಧ ಪಕ್ಷಗಳು ಸುಳ್ಳು ಆರೋಪಗಳನ್ನು ಮಾಡುತ್ತಿದ್ದಾರೆ ಎಂದು ಅಬಕಾರಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ. ತಿಮ್ಮಾಪೂರ ಹೇಳಿದರು.

ನಗರದ ತೌಫಿಕ ಪಾರ್ಥನಳ್ಳಿ ತೋಟದ ಮನೆ ಆವರಣದಲ್ಲಿ ಅಭಿಮಾನಿಗಳ ಬಳಗದವರು ಹಮ್ಮಿಕೊಂಡಿದ್ದ ಸಚಿವ ಆರ್.ಬಿ.ತಿಮ್ಮಾಪೂರ ಅವರ 62ನೇ ಜನ್ಮದಿನದ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದರು.

ಮಾಜಿಮುಖ್ಯಮಂತ್ರಿ ದೇವರಾಜ ಅರಸರಂತೆ ಸಾಮಾಜಿಕ ನ್ಯಾಯ ದೊರಕಿಸಿ ಕೊಡಲು ಸಿದ್ಧರಾಮಯ್ಯ ರಾಜ್ಯದಲ್ಲಿ ಕೆಲಸ ಮಾಡುತ್ತಿದ್ದಾರೆ. ಸಮಾಜದ ಕಟ್ಟಕಡೆ ವ್ಯಕ್ತಿಗೆ ನ್ಯಾಯ ದೊರೆಯಬೇಕು. ಬಡವರ ಮಕ್ಕಳು ಅನ್ನಕ್ಕಾಗಿ ಯಾರ ಮುಂದೆ ಕೈಚಾಚಬಾರದೆಂಬ ಉದ್ದೇಶದಿಂದ ಕಾಂಗ್ರೆಸ ಸರಕಾರ ರಾಜ್ಯದಲ್ಲಿ ಉಚಿತ ಯೋಜನೆಗಳನ್ನು ಜಾರಿಗೆ ತಂದಿದೆ ಎಂದರು.

ಡಾ.ಅಂಬೇಡ್ಕರ ನೀಡಿರುವ ಸಂವಿಧಾನದಿಂದ ದೇಶ ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವ ದೇಶವಾಗಿದೆ. ಪ್ರತಿ ವ್ಯಕ್ತಿಯ ಮತಕ್ಕೆ ಮಾನ್ಯತೆ ಬಂದಿದೆ. ಜನರ




ಮತಗಳನ್ನು ಪಡೆದು ಆಯ್ಕೆಯಾದ ವ್ಯಕ್ತಿಗಳು ಜನಸೇವೆಕರಾಗಬೇಕು. ಹಣ, ಹೆಂಡಕ್ಕೆ ಮತಗಳನ್ನು ಮಾರಿಕೊಂಡರೆ ಸಂವಿಧಾನದ ಆಶಯಕ್ಕೆ ದ್ರೋಹ ಬಗೆದಂತೆ. ಜಮಖಂಡಿ ಭಾವೈಕ್ಯತೆಗೆ ಹೆಸರು ವಾಸಿಯಾದ ನಗರವಾಗಿದೆ. ತಾಲೂಕಿನ ನಾಯಕರು ಜನರಸೇವೆ, ಬಡವರಿಗೆ ಸಹಾಯ ಮಾಡುವ ಕೆಲಸ ಮಾಡಬೇಕು. ಪಾರ್ಥನಳ್ಳಿ ಕುಟುಂಬದವರು ತಮ್ಮನ್ನು ಗೌರವಿಸಿ ಜನ್ಮದಿನದ ಪ್ರಯುಕ್ತ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ಶ್ಲಾಘನೀಯವಾಗಿದೆ ಎಂದರು.

ಯುವ ಕಾಂಗ್ರೇಸ ಮುಖಂಡ ತೌಫಿಕ ಪಾರ್ಥನಳ್ಳಿ ಮಾತನಾಡಿ, ಸಚಿವ ಆರ್.ಬಿ.ತಿಮ್ಮಾಪೂರ ಬರತಕ್ಕ ದಿನಗಳಲ್ಲಿ ರಾಜ್ಯದ ಮುಖ್ಯ ಮಂತ್ರಿಗಳಾಗಲಿದ್ದಾರೆ. ಅವರ ಸರಳ ಸ್ವಭಾವಕ್ಕೆ ದೇವರು ಅವರಿಗೆ ಉನ್ನತ ಸ್ಥಾನ ನೀಡಲಿದ್ದಾನೆ. ಸಚಿವರು ತಮ್ಮ ಜನ್ಮದಿನಕ್ಕೆ ರಕ್ತದಾನ, ಬಡವರಿಗೆ ಅನ್ನದಾನ ಮತ್ತು ರೋಗಿಗಳಿಗೆ ಹಣ್ಣು-ಹಂಪಲು ವಿತರಿಸುವ ಕಾರ್ಯಕ್ರಮಗಳನ್ನು ಮಾಡಬೇಕೆಂಬ ಸಲಹೆಯನ್ನು ತೌಫಿಕ ಅಭಿಮಾನಿ ಬಳಗದವರು ಇಂದು ನೆರವೇರಿದೆ. ಸಚಿವರ ಆಶಯದಂತೆ ರಕ್ತದಾನ ಶಿಬಿರ, ಅನ್ನದಾನ, ರೋಗಿಗಳಿಗೆ ಹಣ್ಣುಹಂಪಲ ವಿತರಿಸಲಾಗಿದೆ. ಸಚಿವ ತಿಮ್ಮಾಪೂರ ಮತ್ತು ತಮ್ಮ ಕುಟುಂಬ ಮೊದಲಿನಿಂದಲೂ ಒಂದೇ ಮನೆಯವರಂತೆ ನಡೆದುಕೊಂಡು ಬರುತ್ತಿವೆ. ಸಚಿವರು ಸಾಮಾನ್ಯ ಕುಟುಂಬದಿಂದ ಜನಾನುರಾಗಿ ನಾಯಕರಾಗಿ ಬೆಳೆದಿದ್ದು, ಸರಳ ಸ್ವಭಾವಕ್ಕೆ ಅವರಿಗೆ ವಿಶೇಷ ಜನಮನ್ನಣೆ ಲಭಿಸುತ್ತಿದೆ ಎಂದರು.

ಮುತ್ತಿನಕಂತಿಮಠದ ಶಿವಲಿಂಗ ಪಂಡಿತಾರಾಧ್ಯ ಶಿವಾಚಾರ್ಯರು, ಹಿರೇಪಡಸಲಗಿ ಮಲ್ಲಪ್ಪಮುತ್ಯಾ, ರುದ್ರಸ್ವಾಮಿ ಪೇಠದ ಸಹಜಾನಂದ ಅವಧೂತರು, ಕೃಷ್ಣಾನಂದ ಅವಧೂತರು, ಗಜಾನನ ಶ್ರೀಗಳು ಸಾನಿಧ್ಯ ವಹಿಸಿದ್ದರು. ವೇದಿಕೆಯಲ್ಲಿ ಅರ್ಬನ ಬ್ಯಾಂಕ ಉಪಾಧ್ಯಕ್ಷ ಮಾಮೂನ ಪಾರ್ಥನಳ್ಳಿ, ಸುಶೀಲಕುಮಾರ ಬೆಳಗಲಿ, ರಫೀಕ ಬಾರಿಗಡ್ಡಿ ಸಹಿತ ಹಲವರು ಇದ್ದರು. ನ್ಯಾಯವಾದಿ ಡಾ.ಮಲ್ಲು ಮಠ ಸ್ವಾಗತಿಸಿದರು. ಪ್ರೋ.ಶ್ರೀನಿವಾಸ ಕಟ್ಟಿಮನಿ ನಿರೂಪಿಸಿದರು. ಅಬುಬಕರ ಕುಡಚಿ ವಂದಿಸಿದರು.

ಸಚಿವರ ಜನ್ಮದಿಂದು ನಗರದ ವಿವಿಧ ಅನಾಥಶ್ರಮದ ಶಾಲಾಮಕ್ಕಳಿಗೆ, ವೃದ್ಧರಿಗೆ ಉಪಹಾರದ ಕಿಟ್‌ಗಳನ್ನು ಮತ್ತು ಸರಕಾರಿ ಆಸ್ಪತ್ರೆಯ ಒಳರೋಗಿಗಳಿಗೆ ಹಣ್ಣುಹಂಪಲ ವಿತರಿಸಲಾಯಿತು. ತೌಫಿಕ ಪಾರ್ಥನಳ್ಳಿ ಅಭಿಮಾನಿ ಬಳಗದವರು ಸ್ವಯಂಪ್ರೇರಿತರಾಗಿ ರಕ್ತದಾನ ಮಾಡಿದರು.

# ಜಕನೂರ ಗ್ರಾಮದಲ್ಲಿ ಸಿದ್ಧಸಿರಿ ಉತ್ಸವ: ಮಾಧುಲಿಂಗಶ್ರೀ

**ಜಮಖಂಡಿ :** ತಾಲೂಕಿನ ಚಕನೂರು ಗ್ರಾಮದ ಮಾದಣ್ಣ ಮದಗೊಂಡೇಶ್ವರ ಸಿದ್ಧಾಶ್ರಮದಲ್ಲಿ ಸೆಪ್ಟೆಂಬರ್ 20 ರಿಂದ 22ರ ವರೆಗೆ ಬಂಡಾರ ಸಂಸ್ಕೃತಿ ಉತ್ಸವ ಜನಪದ ಮತ್ತು ಡೊಳ್ಳಿನ ಕಲಾ ಮಹೋತ್ಸವ 29ನೇ ಸಿದ್ಧಸಿರಿ ಸಂಭ್ರಮ ನಡೆಯಲಿದೆ ಎಂದು ಜಕನೂರಿನ ಸಿದ್ಧಾಶ್ರಮದ ಮಾಧುಲಿಂಗ ಶ್ರೀಗಳು ಹೇಳಿದರು.

ನಗರದ ತೌಫೀಕ ಪಾರತನಳ್ಳಿ ತೋಟದ ಮನೆಯಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಶ್ರೀಗಳು, ಶ್ರೀ ಮಠದಲ್ಲಿ ಹೋಮ ಹವನ ಸಹಿತ ವಿವಿಧ ಸಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಬೆಳಿಗ್ಗೆ 10.30ಕ್ಕೆ ಡೋಳಿನ ಕಲಾವಿದರ ಸಮಾಗಮ ವಿವಿಧ ಕಲಾವಿದರಿಗೆ ಪ್ರಶಸ್ತಿ ಪ್ರದಾನ ನಡೆಯಲಿದೆ. ಸಂಜೆ 6 ಗಂಟೆಗೆ ಸಂಸ್ಕೃತಿ ಕಾರ್ಯಕ್ರಮಗಳು ಶ್ರೀ ಕಾಶಿಲಿಂಗೇಶ್ವರ ಗಾಯನ ಸಂಘ ಮತ್ತು ಸಂಕನಾಳ ಪ್ರಸಿದ್ಧ ಡೊಳ್ಳಿನ ಪದಗಳು ಜರಗಲಿವೆ ಎಂದರು.

ಮಾದಣ್ಣ ಮದಗೊಂಡೇಶ್ವರ ಗದ್ದೆಗೆ



ಪೂಜಾರಿಗಳು ಸಾನಿಧ್ಯ ವಹಿಸುವರು ಮುತ್ತಿನಕಂತಿ ಹಿರೇಮಠದ ಶಿವಲಿಂಗ ಪಂಡಿತರಾಧ್ಯ ಶಿವಾಚಾರ್ಯರು, ಬಬಲಾದಿಯ ಸಿದ್ದಯ್ಯಮೂರ್ತಿ ಸ್ವಾಮಿಗಳು, ಜಾಲಗೇರಿ ಹುಲಜಂತಿಯ ಮಹಾಲಿಂಗೇಶ್ವರ ಮಹಾರಾಜರು, ಜಗದೀಶಾನಂದ ಸ್ವಾಮಿಗಳು, ತುಳಸಿಗೇರಿಯ ಓಂಕಾರೇಶ್ವರ ಸ್ವಾಮಿಗಳು, ಅಮೂಲ್ಯ ಜರಿಯಾನಂದ ಸ್ವಾಮಿಗಳು, ಅಬಕಾರಿ ಸಚಿವ ಆರ್.ಬಿತಿಮ್ಮಾಪೂರ, ಸಚಿವ ಶಿವಾನಂದ ಪಾಟೀ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮಿ ಹೆಬ್ಬಾಳಕರ, ಮಾಜಿ ಶಾಸಕ ಆನಂದ ನ್ಯಾಮಗೌಡ, ಬಿಡಿಸಿಸಿ ಬ್ಯಾಂಕ ನಿರ್ದೇಶಕಿ ಸಯುಕ್ತಾ ಪಾಟೀಲ, ಮಾಜಿ ಸಚಿವೆ ಉಮಾಶ್ರೀ ಸಹಿತ ಹಲವರು ಭಾಗವಹಿಸಲಿದ್ದಾರೆ ಎಂದರು. ಸ. 21ರಂದು ರುದ್ರಾಭಿಷೇಕ, ಕುಂಭಮೇಳ, 1008 ಮಹಿಳೆಯರ ಆರತಿ, ರೈತರ ಸಮಾವೇಶ, ಸರ್ವಧರ್ಮ ಭಾವೈಕ್ಯತೆ ಕಾರ್ಯಕ್ರಮಗಳು ನಡೆಯಲಿವೆ. ಕಾಶಿಪೀಠದ ಮಲ್ಲಿಕಾರ್ಜುನ ಶಿವಾಚಾರ್ಯರು, ಪಂಚಮಶಾಲಿ ಪೀಠದ ಜಯಮೃತ್ಯುಂಜಯ ಮಹಾಸ್ವಾಮಿಗಳು, ಓಲೆಮಠದ ಚನ್ನಬಸವ ಮಹಾಸ್ವಾಮಿಗಳು, ಕಲ್ಯಾಣ ಹೊರಗಿನ ಮಠ ಕೊಣ್ಣೂರಿನ ಡಾ.ಪ್ರಭುದೇವದೇವರು, ಗೋವಾ ಮುಖ್ಯಮಂತ್ರಿ ಪ್ರಮೋದ ಸಾವಂತ, ಅರವಿಂದರಾವ್ ದೇಶಪಾಂಡೆ, ಶಾಸಕ ಜಗದೀಶ ಗುಡಗುಂಟಿ, ಶಾಸಕ ಬಸವನಗೌಡ ಪಾಟೀಲ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಾಜಿ ಉಪಮುಖ್ಯಮಂತ್ರಿ ಕೆಎಸ್. ಈಶ್ವರಪ್ಪ, ಗಂಗಾವತಿ ಶಾಸಕ ಗಾಲಿ ಜನಾರ್ಧನರೆಡ್ಡಿ, ಸಂಸದ ಜಗದೀಶ ಶೆಟ್ಟರ, ಸಂಸದ ಪಿ.ಸಿ.ಗದ್ದಿಗೌಡರ, ವಿಧಾನ ಪರಿಷತ್ ಸದಸ್ಯರಾದ ಹಣಮಂತ ನಿರಾಣಿ, ಪಿ.ಎಚ್. ಪೂಜಾರ ಭಾಗವಹಿಸಲಿದ್ದಾರೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ತೌಫೀಕ ಪಾರತನಳ್ಳಿ, ಶಾಮರಾವ ಘಾಟಿಗೆ, ನಗರಸಭೆ ಅಧ್ಯಕ್ಷ ಪರಮಾನಂದ ಗೌರೋಜಿ, ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಅನ್ವರ ಮೋಮಿನ. ನಗರ ಘಟಕ ಕಾಂಗ್ರೆಸ್ ಅಧ್ಯಕ್ಷ ಮಹೇಶ ಕೋಳಿ, ಅಬುಬಕರ ಕುಡಚಿ, ಸದಾಶಿವ ಕತಾಟೆ, ಎಸ್.ಎ.ಅರಕೇರಿ ಸಹಿತ ಹಲವರು ಇದ್ದರು.

# ಪ್ರಜಾಪ್ರಭುತ್ವ ದಿನಾಚರಣೆ



**ನವಲಗುಂದ :** ಸಮಾಜದಲ್ಲಿ ಸಮಾನತೆ, ಸ್ವಾತಂತ್ರ್ಯ,ಸಹೋದರತೆ ಮೌಲ್ಯಗಳು ಪ್ರಜಾಪ್ರಭುತ್ವದಂತ ರಾಜಕೀಯ ವ್ಯವಸ್ಥೆ ಮೂಲಕ ಮಾತ್ರ ಸಾಕರಗೊಳ್ಳಲು ಸಾಧ್ಯ ಜೊತೆಗೆ ಮೌಲ್ಯಗಳನ್ನು ಎತ್ತಿ ಹಿಡಿಯುವ ಕೆಲಸವಾಗಬೇಕು ಎಂದು ಸಾಹಿತಿ ಡಾ ಸುಗುಣ ಡಿ ವಿ ಹೇಳಿದರು. ಅವರು ಸ್ಥಳೀಯ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಕಾರ್ಯಕ್ರಮದ ಮುಖ್ಯ ಅಥಿತಿಗಳಾಗಿ ಭಾಗವಹಿಸಿ ಮಾತನಾಡಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯರಾದ ಡಾ ಎಂ ಬಿ ಬಾಗಡಿ ಮಾತನಾಡಿ ಸಂವಿಧಾನ ಶಿಲ್ಪಿ ಡಾ ಬಿ ಆರ್ ಅಂಬೇಡ್ಕರ್ ರವರ ಸಾಧನೆಗಳನ್ನು ನೆನೆದು ಸಂವಿಧಾನಾತ್ಮಕ ಅಂಶಗಳನ್ನು ಪಾಲಿಸಲು ವಿದ್ಯಾರ್ಥಿಗಳಿಗೆ ಕರೆ ಕೊಟ್ಟರು.

ಡಾ ಸಂತೋಷ ಹುಬ್ಬಳ್ಳಿ ಸಂವಿಧಾನ ಪೀಠಿಕೆ ವಾಚಿಸಿದರು, ವಿನಾಯಕ ಮಿರಜಕರ ಸ್ವಾಗತಿಸಿದರು, ನಾಗರತ್ನ ಕುರಡೇಕರ ವಂದಿಸಿದರು, ಸವಿತಾ ಚಿಕ್ಕಣ್ಣವರ ನಿರೂಪಿಸಿದರು. ಬಸವರಾಜ ಸೂಡಿ ಮಾನವ ಸರಪಣಿಯ ನೇತೃತ್ವ ವಹಿಸಿದ್ದರು.

# ಮಾನವ ಸರಪಳಿ ಕಾಲಕ್ಕೆ ಹೆಜ್ಜೇನು ದಾಳಿ: ಜನ ದಿಕ್ಕಾಪಾಲು!



**ಲಕ್ಷ್ಮೇಶ್ವರ :** ಅಂತರ್ರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆಯ ಅಂಗವಾಗಿ ಏರ್ಪಡಿಸಲಾಗಿದ್ದ ಮಾನವ ಸರಪಳಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳು, ಶಿಕ್ಷಕರು, ಸಾರ್ವಜನಿಕರು ಮರಳಿ ಬರುತ್ತಿದ್ದಾಗ ಏಕಾಏಕಿ ಹೆಜ್ಜೇನು ದಾಳಿಮಾಡಿದ್ದರಿಂದ ಹಲವರು ಗಾಯಗ-ೊಂಡ ಘಟನೆ ಇಂದು ಮುಂಜಾನೆ ತಾಲೂಕಿನ ಬಾಲೆಹೊಸೂರು ಬಳಿ ಸಂಭವಿಸಿ ಜನರನ್ನು ಗಾಬರಿ, ಆತಂಕಕ್ಕೀಡು ಮಾಡಿತು.

ಏಕಾಏಕಿ ಜೇನು ಹುಳುಗಳು ದಾಳಿಮಾಡುತ್ತಿದ್ದಂತೆ ಗಲಿಬಲಿಗೊಂಡು ವಿದ್ಯಾರ್ಥಿಗಳು ಶಿಕ್ಷಕರು, ಸಾರ್ವಜನಿಕರು ಹೆಜ್ಜೇನು ದಾಳಿಯಿಂದ ಪಾರಾಗಲು ದಿಕ್ಕಾಪಾಲಾಗಿ ಓಡಲಾರಂಬಿಸಿದರು. ಕೆಲವರಿಗೆ ಜೇನು ಹುಳುಗಳು ಕಡಿದಿದ್ದು 15 ರಿಂದ 20 ಕ್ಕೂ ಹೆಚ್ಚು ಮಕ್ಕಳಿಗೆ ಶಿಕ್ಷಕರಿಗೆ ಜೇನು ಕಚ್ಚಿದ್ದಾಗಿ ತಿಳಿದು ಬಂದಿದೆ.

ಕೆಲವರು ವಾಹನದಲ್ಲಿ ಅವಿತುಕೊಂಡರೆ ಕೆಲವರು ಅಲ್ಲಿಯೇ ಇದ್ದ ತಾಡಪತ್ರಿ ಅಡಿ ತೂರಿಕೊಂಡು ಪಾರಾಗಿದ್ದಾರೆ.

ನಂತರ ಗಾಯಾಳುಗಳನ್ನು ಆಸ್ಪತ್ರೆಗೆ ಕರೆದೊಯ್ದು ವೈದ್ಯರೂ ಆದ ಶಾಸಕ ಡಾ. ಚಂದ್ರು ಲಮಾಣಿ, ಇನ್ನಿತರ ವೈದ್ಯರು ಚಿಕಿತ್ಸೆ ನೀಡಿದರು.

# ಶಿಕ್ಷಕರನ್ನು ಗೌರವಿಸುವಲ್ಲಿ ನಾಡಿಗೆ ಭವಿಷ್ಯ



**ಧಾರವಾಡ :** ಎಲ್ಲಿ ಶಿಕ್ಷಕರನ್ನು ಗೌರವಿಸಲಾಗುತ್ತದೆಂಯೋ ಅಲ್ಲಿ ನಾಡಿಗೆ ಭವಿಷ್ಯವಿದೆ. ಒಬ್ಬ ಶಿಕ್ಷಕ ವಿದ್ಯಾರ್ಥಿಗಳಿಗೆ, ಸಮಾಜಕ್ಕೆಜ್ಞಾನದತುತ್ತು, ಅನುಭವದ ಬುತ್ತಿ ನೀಡುತ್ತಾನೆ. ಜ್ಞಾನಕವಚವಾದರೆ, ಅನುಭವ ಹೂರಣ. ಶಿಕ್ಷಕರಿಗೆ ಪಗಾರವಷ್ಟೆಅಲ್ಲಆರೋಗ್ಯದ ವಿಮೆಯನ್ನೂ ಮಾಡಿಕೊಡಬೇಕುಎಂದು ಹಿರಿಯ ಸಾಹಿತಿ ಹಾಗೂ ಕ.ವಿ.ವ.ಸಂಘದಉಪಾಧ್ಯಕ್ಷರಾದ ಪ್ರೊ. ಮಾಲತಿ ಪಟ್ಟಣಶೆಟ್ಟಿಅಭಿಪ್ರಾಯಪಟ್ಟರು.

ಅವರುಕರ್ನಾಟಕ ವಿದ್ಯಾವರ್ಧಕ ಸಂಘವು, ಶ್ರೀಮತಿ ಶಿವಗಂಗಾ ಮತ್ತು ಶ್ರೀ ವೀರಪ್ಪರಾಮಾಪೂರದತ್ತಿ ಅಂಗವಾಗಿ ಆದರ್ಶ ಶಿಕ್ಷಕ ದಂಪತಿ ಪುರಸ್ಕಾರ-2024 ಪ್ರದಾನ ಹಾಗೂಹೊಸ ಪರಿಪಾಠ' ಮತ್ತು ನೇಹಾರಾಣಿ ಕಥೆಗಳು' ಕೃತಿಗಳ ಬಿಡುಗಡೆ ಸಮಾರಂಭದಅಧ್ಯಕ್ಷತೆ ವಹಿಸಿ ಮಾತನಾಡಿದರು.

ಮುಂದುವರೆದು ಮಾತನಾಡಿದಅವರು, ನಿವೃತ್ತರಾದವರನ್ನುಕಡೆಗಣಿಸುವ ುದು ಸಲ್ಲದು.ನಿವೃತ್ತರಲ್ಲಿಅಪಾರ ಅನುಭವಗಳಿರುತ್ತವೆ. ನಮ್ಮ ಆಡಳಿತ ವಲಯಗಳಲ್ಲಿ ನಿವೃತ್ತ ಶಿಕ್ಷಕರ ಪ್ರತಿನಿಧಿಗಳು ಇರಬೇಕು.ಅವರ ಸಲಹೆಗಳನ್ನು ಪಡೆಯಬೇಕು.ಎಲ್ಲ ಸೇವಾ ವಲಯಗಳ ಸಲಹಾ ಸಮಿತಿಗಳಲ್ಲಿ ನಿವೃತ್ತ ಶಿಕ್ಷಕರನ್ನು ಬಳಸಿಕೊಳ್ಳಬೇಕು. ಮನೆಯಲ್ಲಿಅಜ್ಜ, ಅಜ್ಜಿಇದ್ದರೆ ಅದೇ ಅನುಭವ ಮಂಟಪಇದ್ದಂತೆ.ಅವರು ಮನೆಯಲ್ಲಿ ಬದುಕಿನ ಅನುಭವಗಳನ್ನು ಮುಂದಿನ ಪೀಳಿಗೆಗೆ ಹರಿಯಬಿಡುತ್ತಾರೆಎಂದರು.

ಆದರ್ಶ ಶಿಕ್ಷಕ ದಂಪತಿ ಪುರಸ್ಕಾರ ಪ್ರದಾನ ಮಾಡಿ ಮಾತನಾಡಿದಆಕಾಶವಾಣಿ ವಿಶ್ರಾಂತ ನಿರ್ದೇಶಕರಾದಡಾ.ಬಸು ಬೇವಿನಗಿಡದ, ನಮ್ಮದೇಶ ಬಹುತ್ವದೇಶ. ನಾವೆಲ್ಲ ಅಣ್ಣ-ತಮ್ಮಂದಿರರೀತಿ ಬಾಳಬೇಕು.ಇದು ವೈಚಾರಿಕ, ವೈಜ್ಞಾನಿಕ ಚಿಂತನೆಗಳನ್ನು ಅಳವಡಿಸಿಕೊಂಡಾಗ ಮಾತ್ರ ಸಾಧ್ಯವಿದೆ.ಅದೇಅಜ್ಜ ಹಾಕಿದಆಲದ ಮರಕ್ಕೆಜೋತು ಬೀಳುವದಲ್ಲ. ಇಂದಿನ ಮಕ್ಕಳು ಹೊಸ, ಹೊಸ ಸಂಗತಿಗಳಿಗೆ ಆಕರ್ಷಿತರಾಗುತ್ತಿದ್ದಾರೆ.ಅವರಿಗೆ ಬೇಕಾಗಿರುವುದು ಮತೀಯಚಿಂತನೆಅಲ್ಲ. ಹೊಸ ಪರಿಪಾಠ, ನೂತನ ಪರಂಪರೆಯನ್ನು ಹಿರಿಯರಾದ ನಾವು ಕಟ್ಟಿಕೊಡಬೇಕುಎಂದು ಹೇಳಿದರು.

ಆದರ್ಶ ಶಿಕ್ಷಕ ದಂಪತಿ ಪುರಸ್ಕಾರ ಸ್ವೀಕರಿಸಿ ಮಾತನಾಡಿದ ಸಾ.ಶಿ.ಇಲಾಖೆಯ ಜಿಲ್ಲಾಯೋಜನಾ ಸಮನ್ವಯಾಧಿಕಾರಿಎಸ್. ಎಂ. ಹುಡೇದಮನಿ ಈ ಪುರಸ್ಕಾರ ನನಗೆ ಪ್ರೇರಣೆ, ಧೈರ್ಯತುಂಬಿದೆ. ಇಲಾಖೆ ಕಾರ್ಯದಲ್ಲಿ ನನ್ನಲ್ಲಿ ಹೊಸ ಚೈತನ್ಯತುಂಬಿದ್ದೀರಿಎಂದು ಹೇಳಿದರು.

ಶಿಕ್ಷಕಿ ತಹಮೀನಾ ಸೈಯದ ಮಾತನಾಡಿ, ಧಾರವಾಡದ ನೆಲದಲ್ಲಿದೊಡ್ಡ ಶಕ್ತಿ ಇದೆ. ಅದು ನನ್ನ ವ್ಯಕ್ತಿತ್ವವನ್ನು ರೂಪಿಸಿದೆ ಎಂದರು.

ಶಿಕ್ಷಕ ಸಾಹಿತಿ ಶ್ರೀಧರ ಗಸ್ತಿ, ಶಿಕ್ಷಕ ಸಾಹಿತಿಡಾ. ಲಿಂಗರಾಜರಾಮಾಪೂರಅವರ ಹೊಸ ಪರಿಪಾಠ' ಹಾಗೂ ಅವರ ಮಗಳಾದ ಕು. ನೇಹಾ ರಾಮಾಪೂರಅವರನೇಹಾರಾಣಿ ಕಥೆಗಳು' ಪುಸ್ತಕ ಪರಿಚಯ ಮಾಡಿದರು. ಸಂಘದಕಾರ್ಯಕಾರಿ ಸಮಿತಿ ಸದಸ್ಯ ವೀರಣ್ಣಒಡ್ಡೀನ ಸ್ವಾಗತಿಸಿದರು.ಪ್ರಧಾನ ಕಾರ್ಯದರ್ಶಿ ಶಂಕರ ಹಲಗತ್ತಿ ಪ್ರಾಸ್ತಾವಿಕವಾಗಿ ಮಾತನಾಡಿದರು. ವಿಶ್ವೇಶ್ವರಿ ಬ.ಹಿರೇಮಠ ನಿರೂಪಿಸಿದರು. ಕು.ನೇಹಾ, ನವ್ಯ, ನಂದೀಶ ವಚನ ಗಾಯನ ನೆರವೇರಿಸಿದರು. ದತ್ತಿದಾನಿ ಡಾ. ಲಿಂಗರಾಜರಾಮಾಪೂರ ವಂದಿಸಿದರು.

ಕಾರ್ಯಕ್ರಮದಲ್ಲಿ ಸಂಘದಕೋಶಾಧ್ಯಕ್ಷ ಸತೀಶತುರಮರಿ, ಕಾರ್ಯಕಾರಿ ಸಮಿತಿ ಸದಸ್ಯರಾದಡಾ. ಮಹೇಶ ಹೊರಕೇರಿ, ಡಾ. ಧನವಂತ ಹಾಜವಗೋಳ ವ್ಹಿ. ಎನ್. ಕೀರ್ತಿವತಿ, ಪ್ರಮೀಳಾ ಜಕ್ಕಣ್ಣವರ, ಜಗದೀಶ ಬರದೇಲಿ, ಚಂದ್ರಶೇಖರಅಮಿನಗಡ ಹಾಗೂ ಶಿಕ್ಷಣ ಇಲಾಖೆಯಅಧಿಕಾರಿ ಬಳಗ, ರಾಮಾಪೂರ ಹಾಗೂ ಹುಡೇದಮನಿ ಪರಿವಾರದವರು ಸೇರಿದಂತೆಅನೇಕರು ಭಾಗವಹಿಸಿದ್ದರು.

# ನವಲಗುಂದ: ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

**ನವಲಗುಂದ :** ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಸಮಾಜದ ತಾಲ್ಲೂಕಾ ಘಟಕದಿಂದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಪದಗ್ರಹಣ ಸಮಾರಂಭ ಹಾಗೂ 2೦ ಮೀಸಲಾತಿಗಾಗಿ ಹಕ್ಕೋತ್ತಾಯಿಸಿ ಪತ್ರ ಚಳುವಳಿಯು ಸ 18 ರಂದು ಬುದುವಾರ ಮುಂಜಾನೆ 11 ಗಂಟೆಗೆ ಪಟ್ಟಣದ ಹೊರವಲಯದಲ್ಲಿರುವ ವೀರಶೈವ ಲಿಂಗಾಯತ ಸಮುದಾಯ ಭವನದಲ್ಲಿ ಜರುಗಲಿದೆ ಎಂದು ತಾಲ್ಲೂಕಾ ಅಧ್ಯಕ್ಷ ಶಂಕರಗೌಡ ಪಾಟೀಲ್ ಹೇಳಿದರು.



ಪತ್ರಿಕಾಗೋಷ್ಠಿಯಲ್ಲಿಮಾತನಾಡಿದಅವರುಕಾರ್ಯಕ್ರಮದ ಸಾನಿಧ್ಯವನ್ನು ಕೂಡಲಸಂಗಮದ ಶ್ರೀ ಬಸವ ಜಯ ಮೃತ್ಯುಂಜಯ ಮಹಾಸ್ವಾಮಿಗಳು ವಹಿಸುವರು. ಅಂಗಾಯತ-ಪಂಚಮಸಾಲಿ ಸಮಾಜದ ರಾಷ್ಟ್ರೀಯ ಅಧ್ಯಕ್ಷರು, ಶಾಸಕರಾದ ವಿಜಯಾನಂದ ಕಾಶಪ್ಪನವರ ಉದ್ಘಾಟಿಸುವರು, ಮಾಜಿ ಶಾಸಕರಾದ ಡಾ.ಆರ್. ಬಿ. ಶಿರಿಯಣ್ಣವರ ಅಧ್ಯಕ್ಷತೆವಹಿಸುವರು

ಶಾಸಕರಾದ ಎಮ್. ಆರ್. ಪಾಟೀಲ, ಮಾಜಿ ಶಾಸಕರಾದ ಶಂಕರ ಪಾಟೀಲ ಮುನೇನಕೊಪ್ಪ, ಮೋಹನ ಲಿಂಬಿಕಾಯಿ 2೦ ಮೀಸಲಾತಿ ಹೋರಾಟ ಸಮಿತಿ ಕಾರ್ಯಧ್ಯಕ್ಷ ವಿಜಯ ಕುಲಕರ್ಣಿ,ಧಾರವಾಡ ಹಾಲು ಒಕ್ಕೂಟ ನಿರ್ದೇಶಕರಾದ ಶಿವಲೀಲಾ ಕುಲಕರ್ಣಿ, ಪಂಚಮಸಾಲಿ ಸಮಾಜದ ರಾಜ್ಯ ಮಹಿಳಾ ಘಟಕದ ಅಧ್ಯಕ್ಷೆ ವೀಣಾ ವಿಜಯಾನಂದ ಕಾಶಪ್ಪನವರ, ಹೋರಾಟ ಸಮಿತಿ ಜಿಲ್ಲಾಧ್ಯಕ್ಷ ಬಾಪುಗೌಡ ಪಾಟೀಲ , ತಾಲ್ಲೂಕಾ ಅಧ್ಯಕ್ಷ ಶಂಕರಗೌಡ ಬಾಳನಗೌಡ್ರ, ನಗರ ಅಧ್ಯಕ್ಷ ಸುರೇಶ ಕಮ್ಮಾರ, ನಿಂಗಣ್ಣ ಕರೀಕಟ್ಟಿ, ಅಡಿವೆಪ್ಪ ಮನಮಿ, ವಿಜಯಲಕ್ಷ್ಮೀ ಪಾಟೀಲ, ಶಾಂತಾದೇವಿ ನಿಡವಣಿ, ಸದುಗೌಡ ಪಾಟೀಲ, ನಾಗಪ್ಪ ಸಂಕದ, ಗುರುಶಾಂತಗೌಡ ಪಾಟೀಲ, ಮಲ್ಲಿಕಾರ್ಜುನ ಹಿರೇಕೊಪ್ಪ ಇತರರು ಭಾಗವಹಿಸುವರು ಎಂದರು.

2೦ ಮೀಸಲಾತಿ ಹೋರಾಟ ಸಮಿತಿ ಕಾರ್ಯಧ್ಯಕ್ಷ ವಿಜಯ ಕುಲಕರ್ಣಿ, ನಾಗನಗೌಡ ಪಾಟೀಲ್, ಅಶೋಕ ಮರಕುಂಬಿ, ದ್ಯಾಮನಗೌಡ ಪಾಟೀಲ್, ಗೌರೀಶ ಕಮತರ, ಕೆ ಬಿ ಮದನೂರ,ಸುರೇಶಕಮ್ಮಾರ ಇತರರು ಪತ್ರಿಕಾಗೋಷ್ಠಿಯಲ್ಲಿ ಭಾಗವಸಿದ್ದರು.

# ಸ್ಲಂಗಳ ಕಾಮಗಾರಿ ನನೆಗುದಿಗೆ: ಸ್ಲಂ ನಿವಾಸಿಗಳಿಂದ ಧರಣಿ



**ವಿಜಯಪುರ :** ಜನವೇದಿಕೆ ಹಾಗೂ ಸ್ಲಂ ಅಭಿವೃದ್ಧಿ ಸಮಿತಿ ಒಕ್ಕೂಟ ಇವರ ಸಹಯೋಗದಲ್ಲಿ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಕಾರ್ಯಾಲಯದ ಎದುರು ಗುರುವಾರ ಧರಣಿ ಸತ್ಯಾಗ್ರಹ ಮಾಡಲಾಯಿತು. ನಗರದ ಎಲ್ಲ ಸ್ಲಂ ನಿವಾಸಿಗಳು ಮಂಡಳಿ ಕಾರ್ಯಾಲಯದ ಎದುರು ಅಪಾರ ಸಂಖ್ಯೆಯಲ್ಲಿ ಸೇರಿ ಅಧಿಕಾರಿಗಳ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಲಾಯಿತು.

ವಿಜಯಪುರ ಸ್ಲಂ ಅಭಿವೃದ್ಧಿ ಸಮಿತಿ ಅಧ್ಯಕ್ಷ ಮುತ್ತು ಭೋವಿ ಅವರು ಮಾತನಾಡಿ, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಅಧಿಕಾರಿಗಳು ಸ್ಲಂ ಕಾಮಗಾರಿಗಳನ್ನು ಸರಿಯಾಗಿ ಮಾಡುತ್ತಿಲ್ಲ. ಅನೇಕ ಸ್ಲಂಗಳಿಗೆ ಹಕ್ಕುಪತ್ರಗಳು ವಿತರಣೆಯಾಗುತ್ತಿಲ್ಲ. ಪ್ರಧಾನಮಂತ್ರಿ ಆವಾಸ್ ಯೋಜನೆ ಮನೆಗಳ ಕಾಮಗಾರಿ ವಿಳಂಭವಾಗಿ ನಡೆಯುತಿದ್ದು, ಸ್ಲಂಗಳ ಘೋಷಣೆ ಆಗುತ್ತಿಲ್ಲ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಸ್ಲಂ ಅಭಿವೃದ್ಧಿ ಸಮಿತಿ ಜಿಲ್ಲಾ ಸಂಚಾಲಕ ಅಕ್ರಂ ಮಾಶಾಳಕರ ಹಾಗೂ ನಿರ್ಮಲಾ ಹೊಸಮನಿ ಮಾತನಾಡಿದರು.

ಧರಣಿ ಸ್ಥಳಕ್ಕೆ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಅಧಿಕಾರಿ ಶಿವಾನಂದ ರಾಠೋಡ ಅವರು ಆಗಮಿಸಿ ಸ್ಲಂ ನಿವಾಸಿಗಳ ಹಕ್ಕೋತ್ತಾಯಗಳ ಮನವಿ ಸ್ವೀಕರಿಸಿದರು.

ಈ ಸಂದರ್ಭದಲ್ಲಿ ರಮೇಶ ಬಿದರಿ, ಪಂಡಿತ ಖಂಡಗಳ, ಮೀನಾಕ್ಷಿ ಕಾಲೇಬಾಗ, ರೇಷ್ಮಾ ಬಂಡಿವಡ್ಡರ, ಪುಷ್ಪಾ ನೇಗಿನಾಳ, ಅರುಣಾ ಬೋದಿಹಾಳ, ರಫೀಕ ಮನಗೋಳಿ, ಗುರುನಾಥ ವಾಲಿಕಾರ, ಸರಸ್ವತಿ ಕಪಾಳ,? ತೇಜವ್ವ ದಿಂಡವಾರ, ಕೃಷ್ಣಾ ಜಾಧವ, ರಾಜೇಸಾಬ ಸುತಾರ, ಸುಲ್ತಾನ ಅಗಸಿಮನಿ, ಲಾಲಬಿ ಜಾತಗಾರ, ಶ್ರೀದೇವಿ ಘಂಟಿ, ಮಾಲನ ಮುಜಾವರ, ಕಸ್ತೂರಿ ಸಿಂಗೆ, ಕೈರುನ ಜಮಾದಾರ, ಹಮೀದಾ ಪಟೇಲ, ಇಬ್ರಾಹಿಂ ಮಸಗನಾಳ, ಪುಂಡಲಿಕ ರಾಠೋಡ, ಅಶೋಕ ಭಜಂತ್ರಿ ಮುಂತಾದ ಪ್ರಮುಖರು ಸೇರಿದಂತೆ ನೂರಾರು ಸ್ಲಂ ನಿವಾಸಿಗಳು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

# ಕೃಷ್ಣಾ ನದಿಗೆ ಹಾರಿ ಯುವತಿ ಆತ್ಮಹತ್ಯೆ

**ವಿಜಯಪುರ :** ಕೃಷ್ಣಾ ನದಿಗೆ ಹಾರಿ ಯುವತಿಯೊಬ್ಬಳು ಆತ್ಮಹತ್ಯೆ ಮಾಡಿಕೊಂಡ ಘಟನೆ ಮುದ್ದೇಬಿಹಾಳ ತಾಲ್ಲೂಕಿನ ಗಡಗಿ ಗ್ರಾಮದ ಬಳಿ ನಡೆದಿದೆ. ಬಾಗಲಕೋಟೆ ಜಿಲ್ಲೆ ಇಳಕಲ್ ತಾಲೂಕಿನ ಚಟ್ನಿಹಾಳ ಗ್ರಾಮದ ಯುವತಿ ಬಾಲವ್ವ ಕಮರಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಕಳೆದ ಸೆಪ್ಟೆಂಬರ್ 14 ರಂದು ವಿಜಯಪುರ ಜಿಲ್ಲೆ ಮುದ್ದೇಬಿಹಾಳ ತಾಲೂಕಿನ ತಂಗಡಗಿ ಗ್ರಾಮದ ಬಳಿಯ ಸೇತುವೆ ಮೇಲಿಂದ ನದಿಗೆ ಹಾರಿ ಯುವತಿ ಆತ್ಮಹತ್ಯೆ ಮಾಡಿಕೊಂಡಿದ್ದಳು. ಯುವತಿ ಶವ ಪತ್ತೆಗೆ ಎರಡು ದಿನಗಳಿಂದ ಅಗ್ನಿಶಾಮಕ ದಳ ಸಿಬ್ಬಂದಿ ಪ್ರಯತ್ನ ನಡೆಸಿದ್ದು, ಇನ್ನೂ ಯುವತಿ ಶವ ಪತ್ತೆಯಾಗಿಲ್ಲ. ಮುದ್ದೇಬಿಹಾಳ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ಸಂಭವಿಸಿದೆ.

# ಭೀಮಾತೀರದಲ್ಲಿ ಯುವಕನ ಬರ್ಬರ ಹತ್ಯೆ

**ವಿಜಯಪುರ :** ಯುವಕನೊಬ್ಬನನ್ನು ಬರ್ಬರವಾಗಿ ಹತ್ಯೆ ಮಾಡಿರುವ ಘಟನೆ ಜಿಲ್ಲೆಯ ಭೀಮಾತೀರದ ಇಂಡಿ ತಾಲೂಕಿನ ಅಗರಖೇಡ ರಸ್ತೆಯಲ್ಲಿ ಶನಿವಾರ ರಾತ್ರಿ ನಡೆದಿದೆ.

ಇಂಡಿಯ ಇಂಗಳಗಿ ತಾಂಡಾ ಸಂಕೇತ ಚವ್ಹಾಣ (16) ಹತ್ಯೆಯಾದ ಯುವಕ.

ಸಂಕೇತ ಚವ್ಹಾಣ ಈತನಿಗೆ ನಾಲ್ವರು ದುಷ್ಕರ್ಮಿಗಳು ಹರಿತವಾದ ಆಯುಧದಿಂದ ಇರಿದು ಕೊಲೆ ಮಾಡಿ ಪರಾರಿಯಾಗಿದ್ದು, ಕೊಲೆಗೆ ನಿಖರವಾದ ಕಾರಣ ಗೊತ್ತಾಗಿಲ್ಲ.

ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ, ಪರಿಶೀಲಿಸಿದರು. ಇಂಡಿ ಶಹರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

# ಕನ್ನಡ ಸಾಹಿತ್ಯ ಸಮ್ಮೇಳನ ಯಶಸ್ವಿಗೆ ಎಲ್ಲರ ಸಹಕಾರ ಅಗತ್ಯ: ವಾಲಿಕಾರ

**ತಾಳಿಕೋಟೆ :** ತಾಳಿಕೋಟೆ ತಾಲೂಕಾ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನ ಅಕ್ಟೋಬರ 1 ರಂದು ನಡೆಯಲಿದ್ದು ಎಲ್ಲ ರೀತಿಯ ಸಿದ್ದತೆಗಳನ್ನು ತ್ವರಿತಗತಿಯಾಗಿ ಕೈಗೊಳ್ಳಲಾಗುತ್ತಿದೆ ಕನ್ನಡ ಅಭಿಮಾನಿಗಳ ತವರು ತಾಳಿಕೋಟೆ ಹಿರಿಮೆ ಈ ಸಮ್ಮೇಳನ ಹೆಚ್ಚಿಸಲಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಅಧ್ಯಕ್ಷ ಹಾಸೀಂಫೀರಾ ವಾಲಿಕಾರ ಅವರು ತಿಳಿಸಿದರು.



ಬುಧವಾರರಂದು ಪಟ್ಟಣದ ಕನ್ನಡ ಸಾಹಿತ್ಯ ಪರಿಷತ್ ಕಾರ್ಯಾಲಯದಲ್ಲಿ ಕರೆಯಲಾದ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡುತ್ತಿದ್ದ ಅವರು ತಾಳಿಕೋಟೆಯು ನೂತನ ತಾಲೂಕಾ ಕೇಂದ್ರವಾಗಿ ರಚನೆಯಾದ ಬಳಿಕ ಮೊದಲನೇ ತಾಲೂಕಾ ಕನ್ನಡ ಸಾಹಿತ್ಯ ಸಮ್ಮೇಳನವು ಜರುಗುತ್ತಿರುವದರಿಂದ ಕನ್ನಡ ಮನಸ್ಸುಗಳನ್ನು ಒಂದೆಡೆ ಸೇರಿಸುವಂತಹ ವೈಭವ ಪೂರಿತವಾದ ಸಮ್ಮೇಳನ ನಡೆಸಲು ಸಿದ್ದತೆ ಕೈಗೊಳ್ಳಲಾಗುತ್ತಿದೆ ಸುಡಿ ಕನ್ನಡ, ಭಾಷೆ ಕನ್ನಡ ಎಂಬ ಮಾತಾಗದೇ ಮನಸ್ಸಿನ ಆಳದಲ್ಲಿ ಕನ್ನಡ ಪ್ರೇಮವನ್ನು ಹೆಚ್ಚಿಸುವಂತಹ ಸಮ್ಮೇಳನದ ಹಾದಿಯಲ್ಲಿ ಸಾಗಲಾಗುತ್ತಿದೆ ಈ ಸಮ್ಮೇಳನವು ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ರೀತಿಯಲ್ಲಿ ನಡೆಸಲು ಎಲ್ಲ ಕನ್ನಡ ಮನಸ್ಸುಗಳು ಕೈಜೋಡಿಸುತ್ತಿರುವದು ಸಂತಸ ತಂದಿದೆ ಎಂದ ಜಿಲ್ಲಾ ಅಧ್ಯಕ್ಷ ಹಾಸೀಂಪೀರಾ ವಾಲಿಕಾರ ಅವರು ಅಂದು ಸಮ್ಮೇಳನದಲ್ಲಿ ಧ್ವಜಾರೋಹಣ, ಮೆರವಣಿಗೆಗೆ ಚಾಲನೆ, ಸಮ್ಮೇಳನದ ಉದ್ಘಾಟನಾ ಸಮಾರಂಭ, ನಡೆಸಲು ತಿರ್ಮಾನಿಸಲಾಗಿದೆ ಈ ಸಮ್ಮೇಳನದಲ್ಲಿ ಎಲ್ಲ ಕನ್ನಡ ಪ್ರೇಮಿಗಳಿಗೆ ಅವಕಾಶವನ್ನು ಕಲ್ಪಿಸಲು ಮಹಿಳಾ ಗೋಷ್ಠಿ, ಕವಿಗೋಷ್ಠಿ, ಜಾನಪದ ಗೋಷ್ಠಿ, ಒಳಗೊಂಡಂತೆ ಇನ್ನಿತರ ಸಲಹೆಗಳನ್ನು ಮುಂದಿನ ಸಭೆಗಳಲ್ಲಿ ಪಡೆದುಕೊಂಡು ನಿರ್ಧರಿಸಲಾಗುತ್ತದೆ ಉದ್ಘಾಟನಾ ಸಮಾರಂಭದ ನಂತರ ಬಹಿರಂಗ ಸಭೆ ನಂತರ ಎಲ್ಲ ಗೋಷ್ಠಿಗಳ ಮುಕ್ತಾಯದ ನಂತರ ಸಮಾರೋಪ ಸಮಾರಂಭ, ಸಾಂಸ್ಕೃತಿಕ ಉತ್ಸವ ಹೀಗೆ ಹತ್ತು ಹಲವಾರು ಕಾರ್ಯಕ್ರಮಗಳ ಪಟ್ಟಿ ಸಿದ್ದತೆ-ಯಾಗುತ್ತಿದೆ ಎಂದು ಹೇಳಿದ ವಾಲಿಕಾರ ಅವರು ಉಪನ್ಯಾಸ ನೀಡುವರು, ಕಾವ್ಯ ವಾಚನ ಮಾಡುವವರು, ಜಾನಪದ ವಿದ್ವಾಂಸರು, ತಾಲೂಕ ಕನ್ನಡ ಸಾಹಿತ್ಯ ಪರಿಷತ್ತಿನ ತಾಳಿಕೋಟೆ ತಾಲೂಕಾ ಅಧ್ಯಕ್ಷ ರೇವಣಸಿದ್ದಪ್ಪ ಕೊಪ್ಪದ ಅವರಲ್ಲಿ ಹೆಸರು ನೊಂದಾಯಿಸಬೇಕು ಹಾಗೂ ಕನ್ನಡ ಸಾಹಿತ್ಯ ಸಮ್ಮೇಳದ ಸರ್ವಾಧ್ಯಕ್ಷರನ್ನು ಯಾರನ್ನು ಮಾಡಿದರೆ ಸೂಕ್ತವಾಗುತ್ತದೆ ಎಂಬುದರ ಕುರಿತು ಅಧ್ಯಕ್ಷರಾಗುವವರ ಸಾಹಿತ್ಯಾಭಿರುಚಿ, ಕನ್ನಡ ಸಾಹಿತ್ಯಕ್ಕೆ ಅವರ ಕೊಡುಗೆ ಇನ್ನಿತರ ಮಾಹಿತಿಯೊಂದಿಗೆ ತಾಲೂಕಾ ಅಧ್ಯಕ್ಷರ ಬಳಿ ಮಾಹಿತಿ ಸಲ್ಲಿಸಬಹುದಾಗಿದೆ ಎಂದು ಹೇಳಿದರು.

ಕಸಾಪ ತಾಲೂಕ ಅಧ್ಯಕ್ಷ ರೇವಣಸಿದ್ದಪ್ಪ ಕೊಪ್ಪದ ಅವರು ಮಾತನಾಡಿ ಸಂಘ ಸಂಸ್ಥೆಗಳ, ಜನಪ್ರತಿನಿಧಿಗಳ, ಸಾಹಿತಿಗಳ, ಶಿಕ್ಷಕರ, ಕನ್ನಡಾಭಿಮಾನಿಗಳ, ವಿದ್ಯಾರ್ಥಿ ಗಳ ಸಹಯೋಗದೊಂದಿಗೆ ತಾಳಿಕೋಟೆ ತಾಲೂಕಾ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಯಶಸ್ವಿಗೊಳಿಸಲು ಎಲ್ಲರನ್ನು ವಿಸ್ವಾಸಕ್ಕೆ ತೆಗೆದುಕೊಳ್ಳಲಾಗುತ್ತಿದೆ.

ಇದಕ್ಕೆ ಎಲ್ಲರೂ ಸಹಕರಿಸುತ್ತಿರುವದು ಸಮ್ಮೇಳನ ಸಿದ್ದತೆ ನಡೆಸಲು ಪರಿಷತ್ತಿನ ಸದಸ್ಯರಲ್ಲಿ ಇನ್ನಷ್ಟು ಹುಮ್ಮಸ್ಸು ಮೂಡಿಸಲು ಕಾರಣವಾಗಿದೆ ಎಂದರು. ಪತ್ರಿಕಾ ಗೋಷ್ಠಿಯಲ್ಲಿ ಬ ಬಾಗೇವಾಡಿ ಕಸಾಪ ಅಧ್ಯಕ್ಷ ಶಿವಾನಂದ ಡೋಣೂರ, ಆರ್.ಬಿ ದಾನಿ, ಬಿ.ಬಿ ಬಿರಾದಾರ, ಸಿದ್ದು ಶಿರಸಿ, ಜೈಬೀಮ ಮುತ್ತಗಿ, ಬಿ.ಆರ್ ಪೋಲಿಸ ಪಾಟೀಲ, ಗಂಗಾಧರ, ಡಾ ನಜೀರ ಕೋಳ್ಯಾಳ, ಮೊದಲಾದವರು ಉಪಸ್ಥಿತರಿದ್ದರು.

# ಪರಿಶಿಷ್ಟ ಉಪ ಜಾತಿಗಳಿಗೆ ಒಳ ಮೀಸಲಾತಿ ಕಲ್ಪಿಸಲು ಕ್ರಮಕ್ಕೆ ಆಗ್ರಹಿಸಿ ಡಿಎಸ್ಎಸ್ ಪ್ರತಿಭಟನೆ, ಡಿಸಿಗೆ ಮನವಿ ಸಲ್ಲಿಕೆ

**ವಿಜಯಪುರ :** ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ (ಪ್ರೊ. ಬಿ. ಕೃಷ್ಣಪ್ಪ ಸ್ಥಾಪಿತ)ಜಿಲ್ಲಾಸಮಿತಿನೇತೃತ್ವದಲ್ಲಿ'ಪರಿಶಿಷ್ಟ ಜಾತಿಯೊಳಗಿನ ಉಪಜಾತಿಗಳಿಗೆ ಒಳ ಮೀಸಲಾತಿಕಲ್ಪಿಸಲುಸಂವಿಧಾನಬದ್ಧವಾದ ಅಧಿಕಾರ ಇದೆ ಎಂದು ಸುಪ್ರೀಂ ಕೋರ್ಟ್ ನೀಡಿರುವ ತೀರ್ಪು ಐತಿಹಾಸಿಕವಾಗಿದೆ. ಈ ತೀರ್ಪನ್ನು ರಾಜ್ಯ ಸರ್ಕಾರ ತಕ್ಷಣವೇ ಅನು?ಾ?ಠನಗೊಳಿಸುವಂತೆ ಆಗ್ರಹಿಸಿ ಹಾಗೂ ವಿವಿಧ ಹಕ್ಕೊತ್ತಾಯಗಳನ್ನು ಈಡೇರಿಕೆಗಾಗಿ ಒತ್ತಾಯಿಸಿ ಜಿಲ್ಲಾಧಿಕಾರಿ ಟಿ ಭೂಬಾಲನ ಅವರಿಗೆ ಮನವಿ ಸಲ್ಲಿಸಲಾಯಿತು.



ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಚಾಲಕ ತಮ್ಮಣ್ಣ ಕಾನಗಡ್ಡಿ ಮಾತನಾಡಿ, ಪರಿಶಿಷ್ಟ ಜಾತಿಯೊಳಗಿನ ಉಪಜಾತಿಗಳಿಗೆ ಒಳ ಮೀಸಲಾತಿ ಕಲ್ಪಿಸಲು ಸಂವಿಧಾನ ಬದ್ದವಾದ ಅಧಿಕಾರವಿದೆ ಎಂದು ಆಗಸ್ಟ್ 01-2024 ರಂದು ಸುಪ್ರೀಂ ಕೋರ್ಟ್ ನೀಡಿರುವ ತೀರ್ಪು ಐತಿಹಾಸಿಕವಾಗಿದೆ.

ಈ ತೀರ್ಪನ್ನು ಅನುಷ್ಠಾನಗೊಳಿಸಲು ರಾಜ್ಯ ಸರ್ಕಾರಗಳಿಗೆ ಅಧಿಕಾರ ಇದೆ ಎಂದು ಸುಪ್ರೀಂ ಕೋರ್ಟ್ ನೀಡಿರುವ ಆದೇಶವನ್ನು ರಾಜ್ಯ ಸರ್ಕಾರ ತಕ್ಷಣವೇ ಅನುಷ್ಠಾನಗೊಳಿಸಬೇಕು. ಕರ್ನಾಟಕದಲಿತ ಸಂಘರ್ಷ ಸಮಿತಿಯ ಸಂಸ್ಥಾಪಕ ಪ್ರೊ. ಬಿ. ಕೃಷ್ಣಪ್ಪನವರ ಜನ್ಮ ದಿನವಾದ ಜೂನ್ 09 ನ್ನು ಸರ್ಕಾರಿ ಕಾರ್ಯಕ್ರಮವನ್ನಾಗಿ ಆಚರಿಸಬೇಕು. ಪ್ರೊ?ರ. ಬಿ.ಕೃಷ್ಣಪ್ಪನವರಿಗೆ "ಕರ್ನಾಟಕ ರತ್ನ " ಪ್ರಶಸ್ತಿ ಯನ್ನು ರಾಜ್ಯ ಸರ್ಕಾರ ನೀಡಬೇಕು. ಬಾಕಿ ಉಳಿದಿರುವ "ಬ್ಯಾಕ್ ಲಾಗ್" ಹುದ್ದೆಗಳನ್ನು ರಾಜ್ಯ ಸರ್ಕಾರ ತಕ್ಷಣವೇ ಭರ್ತಿ ಮಾಡಬೇಕು. ಒಳಮೀಸಲಾತಿ ಜಾರಿಯಾಗುವವರೆಗೂ ರಾಜ್ಯ ಸರ್ಕಾರದ ಎಲ್ಲಾ ಹೊಸ ನೇಮಕಾತಿ ಪ್ರಕ್ರಿಯೆಗಳನ್ನು ತಡೆ ಹಿಡಿಯಬೇಕು ಎಂದರು.

ಜಿಲ್ಲಾ ಸಂಘಟನಾ ಸಂಚಾಲಕ ವಾಯ್. ಎಸ್. ಮ್ಯಾಗೇರಿ ಹಾಗೂ ಭಾರತೀಯ ದಲಿತ ಪ್ಯಾಂಥರ್ ಬಸವರಾಜ ಗುಡಿಮನಿ ಮಾತನಾಡಿ, ಬಗರ್ ಹುಕುಂ ಸಾಗುವಳಿಯನ್ನು ಸಕ್ರಮಗೊಳಿಸಿ ಹಕ್ಕು ಪತ್ರ ನೀಡಬೇಕು. ಕಳೆದ ಎರಡು ಮೂರು ತಲೆಮಾರುಗಳಿಂದ 3-4 ಎಕರೆ ಯಷ್ಟು ಅರಣ್ಯಭೂಮಿ ಸಾಗುವಳಿ ಮಾಡುತ್ತಾ ಉಪ ಜೀವನ ಸಾಗಿಸುತ್ತಿರುವ ಕೃಷಿ ಕಾರ್ಮಿಕರನ್ನು ದೌರ್ಜನ್ಯದಿಂದ ಒಕ್ಕಲೆಬ್ಬಿಸದೆ ಪರ್ಯಾಯ ಭೂಮಿ ನೀಡಬೇಕು- ಬೇನಾಳ ಗ್ರಾಮದಲ್ಲಿ ರಿ.ಸ.ನಂ: 22130 ವರ್ಷಗಳಿಂದ ಸಾಗುವಳಿ ಮಾಡುತ್ತಿದ್ದ ಸರ್ಕಾರಿ ಜಮೀನನ್ನು ಸಾಗವಳಿ ಮಾಡುತ್ತಿದ್ದ ದಲಿತರಿಗೆ ಕೂಡಲೇ ಹಕ್ಕುಪತ್ರ ನೀಡಬೇಕು. ಸಾಗುವಳಿ ಮಾಡುವ ಚೀಟಿ ನೀಡಬೇಕು.

ಆಲಮಟ್ಟಿ ಪಂಪ್ ಹತ್ತಿರ ಡಾ. ಬಿ.ಆರ್. ಅಂಬೇಡ್ಕರವರ ವೃತ್ತ ನಿರ್ಮಾಣ ಮಾಡಬೇಕು.

ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ವಸತಿ ನಿಲಯ ಮತ್ತು ವಸತಿ ಶಾಲೆಗಳಲ್ಲಿ ಹೊರ ಸಂಪನ್ಮೂಲದಡಿ ಕೆಲಸ ನಿರ್ವಹಿಸುತ್ತಿರುವ ನೌಕರರನ್ನು ಕಾಯಂಗೊಳಿಸಬೇಕೆಂದರು.

ಈ ಸಂದರ್ಭಧಲ್ಲಿ ಹರೀಶ ಮ್ಯಾಗೇರಿ, ರಾಯಪ್ಪದೊಡಮನಿ,ಕನಕೇಶಬಾಗೇವಾಡಿ, ಸಂಗಮೇಶ ಕಳ್ಳಿಮನಿ, ಪವಾಡೆಪ್ಪ ಮಾದರ, ಭೀಮಪ್ಪ ಮಾದರ, ಅಣ್ಣಪ್ಪ ಮಾದರ, ಬೀರಪ್ಪ ದೊಡಮನಿ ತಿಪ್ಪಣ್ಣ ಮಾದರ ಮತ್ತಿತರರು ಉಪಸ್ಥಿತರಿದ್ದರು.

# ಸಂಭ್ರಮದ ಚಿಮ್ಮಡ ಪ್ರಭುಲಿಂಗೇಶ್ವರ ಕಿಚಡಿ ಜಾತ್ರೆ

## ಎರಡು ಲಕ್ಷಕ್ಕೂ ಅಧಿಕ ಜನ ಭಕ್ತರು ಭಾಗಿ । ಅಲಂಕ್ರತ ನೂರಾರು ಟ್ರಾಕ್ಟರ್‌ಗಳಮೆರವಣಿಗೆ

**ಚಿಮ್ಮಡ :** ಗ್ರಾಮದಲ್ಲಿ ಕಳೆದ ಎರಡು ದಿನಗಳ ಕಾಲ ಗ್ರಾಮದಲ್ಲಿ ಸಂಭ್ರಮ ಮೂಡಿಸಿದ್ದ ಆರಾದ್ಯದೈವ ಶ್ರೀ ಪ್ರಭುಲಿಂಗೇಶ್ವರ ಕಿಚಡಿ ಜಾತ್ರೆ ಹಲವಾರು ವಿಶೇಷಗಳೊಂದಿಗೆ ವಿಜ್ರಂಭನೆಯಿಂದ ನೆರವೇರಿತು.

ರವಿವಾರ ಮುಂಜಾನೆ ಷಟಸ್ಥಲ ಧ್ವಜಾರೋಹಣದೊಂದಿಗೆ ಪ್ರಾರಂಭಗೊಂಡ ಜಾತ್ರಾ ಮಹೋತ್ಸವದಲ್ಲಿ ರಾತ್ರಿ ಅಲಂಕೃತ ನೂರಾರು ಟ್ರ್ಯಾಕ್ಟರಗಳ ಮೂಲಕ ಮೆರವಣಿಗೆಯೊಂದಿಗೆ ಕಿಚಡಿ ಪ್ರಸಾದದ ಸಾಮಗ್ರಿಯನ್ನು ದೂರದ ಗುಡ್ಡದ ಪ್ರಭುಲಿಂಗೇಶ್ವರ ದೇವಸ್ಥಾನಕ್ಕೆ ಸಾಗಿಸಲಾಯಿತು ಈ ಅಲಂಕೃತ ಟ್ರ್ಯಾಕ್ಟರಗಳನ್ನು ನೋಡುವುದೇ ಕಣ್ಣಿಗೆ ಹಬ್ಬ. ಒಂದೊಂದು ಟ್ರ್ಯಾಕ್ಟರಗಳ ಶೃಂಗಾರಕ್ಕೆ ರೈತರು ಹತ್ತರಿಂದ ಎಂಬತ್ತು ಸಾವಿರ ರೂ.ಗಳವರೆಗೆ ಖರ್ಚು ಮಾಡಿದ್ದರು.

ಸೋಮವಾರ ಬೆಳಿಗ್ಗೆ 6 ಘಂ, ವಿಶೇಷಪೂಜೆ, ರುದ್ರಾಭಿಷೇಕ, ಪಲ್ಲಕ್ಕಿ







ಮಹೋತ್ಸವ ನಂತರ ನಡೆದ ಆದ್ಯಾತ್ಮಿಕ ಚಿಂತನಗೋಷ್ಟಿಯಲ್ಲಿ ನಾಡಿನ ಅನೇಕ ಶ್ರೀಮಠಗಳ ಪೂಜ್ಯ ಮಠಾಧೀಶರು ಪಾಲ್ಗೋಂಡಿದ್ದರು. ಮದ್ಯಾಹ್ನ ಶ್ರೀಗಳ ಹಸ್ಥಸ್ಪರ್ಶದೊಂದಿಗೆ ಆರಂಭಗೊಡ ಕಿಚಡಿ ಪ್ರಸಾದ ವಿತರಣೆಯಲ್ಲಿ ಬಾಗಲಕೋಟ, ವಿಜಯಪುರ, ಬೆಳಗಾವಿ ಜಿಲ್ಲೆಯಲ್ಲದೇ ನೆರೆಯ ಮಹಾರಾಷ್ಟ್ರದಿಂದಲೂ ಲಂಕ್ಷಾಂತರ ಜನ ಭಕ್ತಾಧಿಗಳು ಸೇವಿಸಿ ಶ್ರೀ ಪ್ರಭುವಿನ ಕೃಪೆಗೆ ಪಾತ್ರರಾದರು.

ಸಂಜೆ ಕರಡಿ ಮಜಲು, ಬ್ಯಾಂಡ ಬಾಜಾ, ಹಲಗಿ ಮೇಳ ಸೇರಿದಂತೆ ವಿವಿಧ ವಾದ್ಯವೃಂದಗಳೊಂದಿಗೆ ನಡೆದ ಅಲಂಕೃತ ಜೋಡಿ ನಂದಿಕೋಲ ಉತ್ಸವ ಆಕರ್ಷನೀಯವಾಗಿತ್ತು. ರಾತ್ರಿ ಶ್ರೀ ಪ್ರಭುಲಿಂಗೇಶ್ವರ ಕಲೆ ಮತ್ತು ಸಾಂಸ್ಕೃತಿಕ ನಾಟ್ಯ ಸಂಘದ ಕಲಾವಿದರಿಂದ "ಕಳ್ಳ ಗುರು ಸುಳ್ಳ ಶಿಷ್ಯ" ಹಾಗೂ ಶ್ರೀ ಕರಿಸಿದ್ದೇಶ್ವರ ಯುವಕ ನಾಟ್ಯ ಸಂಘ ಕಲಾವಿಧರಿಂದ "ಸಿಡಿದೆದ್ದ ಶಿವಶಕ್ತಿ" ಎಂಬ ಎರಡು ನಾಟಕಗಳು ಪ್ರದರ್ಶನಗೊಂಡವು ಈ ಜಾತ್ರಾ ಮಹೋತ್ಸವದಲ್ಲಿ ಸಂಸದ ಪಿಸಿ ಗದ್ದಿಗೌಡರ್, ಕ್ಷೇತ್ರ ಶಾಸಕ ಸಿದ್ದು ಸವದಿ, ಮಾಜಿ ಸಚಿವ ಮುರುಗೇಶ ನಿರಾಣಿ, ಸಿದ್ದು ಕೊಣ್ಣೂರ, ಡಾ, ಎ. ಆರ್. ಬೆಳಗಲಿ, ಸಂಗಮೇಶ ನಿರಾಣಿ ತಾಲೂಕಾ ದಂಡಾಧಿಕಾರಿ ಗಿರೀಶ ಸ್ವಾಧಿ ಸೇರಿದಂತೆ ಹಲವಾರು ಪ್ರಮುಖ ರಾಜಕಾರಣಿಗಳು ಹಿರಿಯ ಅಧಿಕಾರಿಗಳು ಆಗಮಿಸಿದ್ದರು.

ಬನಹಟ್ಟಿ ಸಿಪಿಐ ಸಂಜೀವ ಬಳಗಾರರವರ ಮಾರ್ಗದರ್ಶದಲ್ಲಿ ಠಾಣಾಧಿಕಾರಿ ಶ್ರೀಮತಿ ಶಾಂತಾ ಹಳ್ಳಿ, ವಿಜಯ ಕಾಂಬಳೆ ಸೂಕ್ತ ಬಂದೋಬಸ್ತ ಕೈಗೊಂಡಿದ್ದರು. ಸರ್ವ ಧರ್ಮಿಯರೂ ಸೇರಿ ಅಚ್ಚುಕಟ್ಟುತನದಿಂದ ನಡೆಸುವ ಈ ಜಾತ್ರೆಯಲ್ಲಿ ಸುಮಾರು 210 ಕೆಜಿ. ಅಕ್ಕಿ ಬೇಳೆ, 30 ಕ್ವಿಂಟಾಲ್ ಮಸಾಲೆ ಪದಾರ್ಥಗಳಿಂದ ತಯಾರಿಸಲಾಗಿದ್ದ ಕಿಚಡಿ ಪ್ರಸಾದ ಕೇವಲ 6 ಘಂಟೆಗಳಲ್ಲಿ ಭಕ್ತಾಧಿಗಳು ಸ್ವೀಕರಿಸಿ ತೃಪ್ತಿವೆಕ್ತಪಡಿಸುವುದು ವಿಶೇಷ.

# ಮಹಾಲಿಂಗಪುರ ಹಿಂದೂ ಮುಸ್ಲಿಂ ಭಾವೈಕ್ಯತೆಗೆ ಮಾದರಿ ಪಟ್ಟಣ: ಸಚಿವ ತಿಮ್ಮಾಪುರ

**ಮಹಾಲಿಂಗಪುರ :** ನಾಡಿನಲ್ಲಿಯೇ ಮಹಾಲಿಂಗಪುರ ಪಟ್ಟಣ ಹಿಂದೂ ಮುಸ್ಲಿಂ ಸಹಬಾಳ್ವೆಯ ಭಾವೈಕ್ಯತೆಗೆ ಹೆಸರುವಾಸಿಯಾದ ಮಾದರಿ ಪಟ್ಟಣವಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪುರ ಹೇಳಿದರು.

ಸೋಮವಾರ ಪಟ್ಟಣದ ಬಸವೇಶ್ವರ ವೃತ್ತದಲ್ಲಿಯ ಅಶ್ವಾರೂಢ ಶ್ರೀಬಸವೇಶ್ವರ ಕಂಚಿನ ಪುತ್ಥಳಿ ಅನಾವರಣಗೊಳಿಸಿ, ಪುರಸಭೆ ಅಧ್ಯಕ್ಷ ಯಲ್ಲನಗೌಡ ಪಾಟೀಲ ಅವರಿಂದ ಪೌರ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು ಜಗತ್ತಿಗೆ ಸಮಾನತೆಯನ್ನು ಸಾರಿದ ಜಗಜ್ಯೋತಿ ಶ್ರೀಬಸವೇಶ್ವರರ ಪುತ್ಥಳಿ ಪ್ರತಿಷ್ಠಾಪನೆ ಮಾಡಿದ್ದು ಸಮಯೋಚಿತವಾಗಿದೆ ಎಂದರು.

ಮಹಾಲಿಂಗೇಶ್ವರ ದೇವಸ್ಥಾನದಿಂದ ಶಾಸಕ ಸಿದ್ದು ಸವದಿ, ಸಂಸದ ಪಿ.ಸಿ. ಗದ್ದಿಗೌಡರ ಮತ್ತು ಬಸವ ಬಳಗದ ಸದಸ್ಯರು ವಚನ ಸಾಹಿತ್ಯವನ್ನು ತಲೆ ಮೇಲೆ ಹೊತ್ತು ಮಂಗಳವಾದ್ಯಗಳೊಂದಿಗೆ ವೇದಿಕೆಗೆ ಆಗಮಿಸಿ ಗೌರವ ಸೂಚಿಸಿದರು.



ಮಹಾಲಿಂಗೇಶ್ವರ ಶಿವಯೋಗಿ ರಾಜೇಂದ್ರ ಮಹಾಸ್ವಾಮಿಗಳು ಸಾನಿಧ್ಯವಹಿಸಿದ್ದರು. ಪುರಸಭೆ ಅಧ್ಯಕ್ಷ ಯಲ್ಲನಗೌಡ ಪಾಟೀಲ, ಉಪಾಧ್ಯಕ್ಷೆಶೀಲಾ ಭಾವಿಕಟ್ಟಿ,ಸ್ಥಾಯಿ ಸಮಿತಿ ಚೇರಮನ್ ಅಬ್ದುಲ್‌ರಜಾಕ ಬಾಗವಾನ, ಮುಖಂಡರಾದಸಿದ್ದುಕೊಣ್ಣೂರ,ರವಿಗೌಡ ಪಾಟೀಲ, ಬಲವಂತಗೌಡ ಪಾಟೀಲ, ಬಾಳಕೃಷ್ಣ ಮಾಳವಾದೆ, ಮಹಾಲಿಂಗಪ್ಪ ತಟ್ಟಿಮನಿ, ನಿಂಗಪ್ಪ ಬಾಳಿಕಾಯಿ, ಪ್ರಕಾಶ ಮಮದಾಪುರ,
ಕೃಷ್ಣಗೌಡ ಪಾಟೀಲ, ಶೇಖರ ಅಂಗಡಿ, ಪುರಸಭೆ ಮುಖ್ಯಾಧಿಕಾರಿ ಈರಣ್ಣ ದಡ್ಡಿ, ನೀರಾವರಿ ಇಲಾಖೆಯ ಅಧಿಕಾರಿ ಮಹಾಂತೇಶ ಯಡಪ್ಪನವರ ಸೇರಿದಂತೆ ಹಲವರು ಇದ್ದರು.

**ಪ್ರತಿನಿಧಿಗಳ ತರಾತುರಿಗೆ ಬೇಸರ :**
**ಉಸ್ತುವಾರಿ ಸಚಿವ ತಿಮ್ಮಾಪುರ ವೇದಿಕೆಗೆ ಆಗಮಿಸುತ್ತಲೇ ನಿರೂಪಕರಿಂದ ಸ್ವಾಗತ ಭಾಷಣಕ್ಕೂ ಅವಕಾಶ ನೀಡದೇ ನೇರವಾಗಿ ಭಾಷಣ ಮಾಡಲು ಧಾವಿಸಿ ಕೇವಲ ಎರಡು ನಿಮಿಷಗಳಲ್ಲಿ ಭಾಷಣ ಮುಗಿಸಿ ವೇದಿಕೆಯಿಂದ ನಿರ್ಗಮಿಸಿದರು. ಅವರ ಹಿಂದೆಯೇ ಸಂಸದರು, ಶಾಸಕರು ಕೂಡ ಯಾವುದೇ ಭಾಷಣ ಮಾಡದೆ ತೆರಳಿದ್ದರಿಂದ ಜನಪ್ರತಿನಿಧಿಗಳ ತರಾರುರಿಗೆ ನೆರೆದಿದ್ದ ಜನತೆ ಬೇಸರವ್ಯಕ್ತಪಡಿಸಿದರು. ಕಾರ್ಯಕ್ರಮದ ಆರಂಭದಲ್ಲಿಯೂ ಬಸವ ಧ್ವಜಾರೋಹಣಕ್ಕೆ ಸಚಿವರನ್ನು ಆಹ್ವಾನಿಸಿದರೂ ಬಾರದ ಹಿನ್ನೆಲೆಯಲ್ಲಿ ಸಂಸದರು ಹಾಗೂ ಶಾಸಕರು ನೆರವೇರಿಸಿದರು. ಇದು ಜನಪ್ರತಿನಿಧಿಗಳು ಬಸವೇಶ್ವರರಿಗೆ ಮಾಡಿದ ಅವಮಾನವೆಂದು ಬಸವಾಭಿಮಾನಿಗಳು ಗೊನಗಿದರು.**

# ಲೋಕ ಅದಾಲತ್‌ನಲ್ಲಿ ಒಂದಾದ ದಂಪತಿಗಳು



**ಜಮಖಂಡಿ :** ವಿವಾಹ ವಿಚ್ಛೇದನ ಕೋರಿ ನ್ಯಾಯಾಲಯದ ಮೊರೆ ಹೋಗಿದ್ದ ಎರಡು ಜೋಡಿ ದಂಪತಿಗಳಿಗೆ ತಿಳಿವಳಿಕೆ ನೀಡಿ ಒಂದುಗೂಡಿಸಿದ ಘಟನೆ ಇಲ್ಲಿನ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ನಡೆದಿದೆ. ತಾಲ್ಲೂಕು ಕಾನೂನು ಸೇವಾ ಸಮಿತಿ ಆಶ್ರಯದಲ್ಲಿ ಶನಿವಾರ ನಡೆದ ಲೋಕ ಅದಾಲತ್‌ನಲ್ಲಿ ದಂಪತಿಗಳಿಗೆ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶೆ ಕವಿತಾ ಎಸ್. ಉಂಡೋಡಿ ಒಂದಾಗಿ ಜೀವನ ನಡೆಸುವಂತೆ ನೀಡಿದ ಬುದ್ಧಿ ಮಾತಿಗೆ ಸಮ್ಮತಿಸಿ ದಂಪತಿಗಳು ಒಪ್ಪಿಕೊಂಡರು.

ಕಲ್ಲಹಳ್ಳಿ ಗ್ರಾಮದ ಸದಾಶಿವ ನಾಗಪ್ಪ ಬಸವಣ್ಣಪೂಜಾರಿ ಹಾಗೂ ಆತನ ಪತ್ನಿ ಗೀತಾ ಸದಾಶಿವ ಬಸವಣ್ಣಪೂಜಾರಿ ಮತ್ತು ಜಮಖಂಡಿ ನಗರದ ಗೋಪಾಲ ಶಾಮರಾವ ಭಜಂತ್ರಿ ಮತ್ತು ಆತನ ಪತ್ನಿ ರಜನಿ ಗೋಪಾಲ ಭಜಂತ್ರಿ ಒಂದಾದ ದಂಪತಿಗಳಾಗಿದ್ದಾರೆ.

ಸಂಸಾರದಲ್ಲಿ ಬರುವ ಭಿನ್ನಭಾವ ಮತ್ತು ಕಲಹಗಳಿಗೆ ಜೋತು ಬಿದ್ದು ಜೀವನವನ್ನು ಹಾಳು ಮಾಡಿಕೊಳ್ಳದೆ ಪರಸ್ಪರ ಅರ್ಥಮಾಡಿಕೊಂಡು ಜೀವನ ನಡೆಸಿ ಬದುಕಿನ ಸಾರ್ಥಕತೆ ಕಂಡುಕೊಳ್ಳಬೇಕು ಎಂದು ದಂಪತಿಗಳಿಗೆ ತಿಳಿವಳಿಕೆ ನೀಡಲಾಯಿತು. ದಂಪತಿಗಳ ಪೋಷಕರಿಗೆ ಹಾಗೂ ಹಿರಿಯರಿಗೂ ಸಹ ತಿಳಿವಳಿಕೆ ನೀಡಲಾಯಿತು.

ವಕೀಲರುಗಳಾದ ಎಸ್.ಎ. ಅಂಬಿ, ಎಸ್.ಕೆ. ಹಾಲಳ್ಳಿ, ಕಟ್ಟೆಪ್ಪನವರ, ಸಂಧಾನಗಾರ್ತಿ ವಕೀಲರಾದ ಜೆ.ಬಿ. ಕಳಸಣ್ಣವರ ಲೋಕ ಅದಾಲತ್‌ನಲ್ಲಿ ಹಾಜರಿದ್ದರು. ಅವರೆಲ್ಲರ ಸಮ್ಮುಖದಲ್ಲಿ ಒಂದಾದ ದಂಪತಿಗಳು ಸಿಹಿ ಹಂಚಿ ಖುಷಿಪಟ್ಟರು. ಲೋಕ ಅದಾಲತ್‌ನಲ್ಲಿ ಈ ವರೆಗೆ 1263 ವ್ಯಾಜ್ಯಗಳನ್ನು ಇತ್ಯರ್ಥ ಮಾಡಲಾಗಿದೆ ಎಂದು ಮೂಲಗಳು ತಿಳಿಸಿವೆ.

# "ಗುರು, ಅಕ್ಷರ ಮತ್ತು ಸಂಸ್ಕಾರ ನೀಡುವುದರ ಮೂಲಕ ನಮ್ಮನ್ನೂ ಗುರುವಾಗಿಸುತ್ತಾನೆ": ಲೇಖಕ ಮಣ್ಣೆ ಮೋಹನ್

**ನೆಲಮಂಗಲ :** "ನಿಮಿತ್ತ ಬಂಧುಗಳಿಗೆ ನಮ್ಮಲ್ಲಿ ಕೊರತೆ ಇಲ್ಲ. ನಮ್ಮಲ್ಲಿ ಹಣ, ಅಧಿಕಾರ ಇರುವವರೆಗೂ ಅವರು ಇರುತ್ತಾರೆ. ಅವುಗಳು ಇಲ್ಲದಿದ್ದಾಗ ದೂರವಾಗುತ್ತಾರೆ. ಆದರೆ ಗುರು ಮತ್ತು ಶಿಷ್ಯರ ಸಂಬಂಧ ಅನಿಮಿತ್ತ ಬಂಧು. ಅದಕ್ಕೆ ಜಾತಿ ಭೇದವಿಲ್ಲ, ಹಣ ಭೇದವಿಲ್ಲ, ಸಂಪತ್ತಿನ ಭೇದವಿಲ್ಲ. ಅದು ಒಂದು ರೀತಿ ವಿಶಿಷ್ಟವಾದದ್ದು,ಗುರು ಕೊಟ್ಟಂತಹ ಒಂದು ಅಕ್ಷರಕ್ಕೆ ಕುಬೇರನ ಸಮಗ್ರ ಬಂಡಾರವೇ ಸಮವಲ್ಲ ಎನ್ನುತ್ತಾರೆ. ನಿಮಗೆ ಗುರು ಕೊಟ್ಟಿರುವ ಅಕ್ಷರ, ಅಕ್ಷಯಪಾತ್ರೆಯಾಗಲಿ. ಅಂದು ಶಾಲೆಯನ್ನು ಹುಡುಕಿಕೊಂಡು ಪೋಷಕರು ಮತ್ತು ಮಕ್ಕಳು ಬರುತ್ತಿದ್ದರು. ಆದರೆ ಇಂದಿನ ಪರಿಸ್ಥಿತಿ ಏನಾಗಿದೆ ಎಂದರೆ ಮಕ್ಕಳನ್ನು ಹುಡುಕಿಕೊಂಡು ಗುರುಗಳೇ ಹೋಗುವಂತಾಗಿದೆ. ನಾವು ನಿಮಗೆ ಉಚಿತವಾಗಿ ಎಲ್ಲವನ್ನೂ ಕೊಡುತ್ತೇವೆ, ನಮ್ಮ ಶಾಲೆಗೆ ಬನ್ನಿ ಎಂದು ಗುರುಗಳು ಅಂಗಲಾಚುವ ಪರಿಸ್ಥಿತಿ ಬಂದಿದೆ" ಎಂದು ಶಿವಗಂಗಾಕ್ಷೇತ್ರದ ಶ್ರೀ ಮೇಲಣಗವಿ ವೀರಸಂಹಾಸನ ಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಶ್ರೀ ಶ್ರೀ ಡಾ? ಮಲಯ ಶಾಂತಮುನಿ ದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳು ತಿಳಿಸಿದ್ದಾರೆ. ಅವರು ಕುಲುವನಹಳ್ಳಿ ಶ್ರೀ ಜಗದ್ಗುರು ರೇವಣ ಸಿದ್ದೇಶ್ವರ ಗ್ರಾಮಾಂತರ ಪ್ರೌಢಶಾಲೆಯಲ್ಲಿ 2004–2005ನೇಸಾಲಿನವಿದ್ಯಾರ್ಥಿಗಳಿಂದ ಆಯೋಜಿಸಲಾಗಿದ್ದ ಗುರುವಂದನಾ ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ವಹಿಸಿ ಮಾತನಾಡಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಲೇಖಕ ಚಿಂತಕ ಅಂಕಣಕಾರ ಮಣ್ಣೆ ಮೋಹನ್ ಮಾತನಾಡಿ "ಮಾನವನ ಎರಡು ಕಣ್ಣುಗಳಾದ ಅಕ್ಷರ ಮತ್ತು ಸಂಸ್ಕಾರ–ಇವೆರಡು ಗುರುವಿನ ಬಳುವಳಿಗಳು. ಗುರು ಅಕ್ಷರ ಮತ್ತು ಸಂಸ್ಕಾರ ನೀಡುವುದರ ಮೂಲಕ ನಮ್ಮನ್ನೂ ಗುರುವಾಗಿಸುತ್ತಾನೆ. ಗುರು ಅರಿವನ್ನು, ವಿದ್ಯೆಯನ್ನು ಮಾತ್ರ ನೀಡುವುದಿಲ್ಲ. ಬದಲಿಗೆ ಶಿಸ್ತು,, ಸಂಯಮ, ಸಮಯ ಪಾಲನೆ, ನಿಯಮ ಪಾಲನೆ, ಸಮ ಚಿತ್ತದಿಂದ ಜೀವನ ನಡೆಸುವ ಕಲೆ, ಸಹಬಾಳ್ವೆ, ಸಾಮರಸ್ಯ, ಮಾರ್ಗದರ್ಶನ, ಮಾನವೀಯ ಮೌಲ್ಯ, ಯಶಸ್ಸು, ಕೀರ್ತಿ ಇವೆಲ್ಲವನ್ನೂ ಗುರು ನೀಡುತ್ತಾನೆ.

ನಮ್ಮಲ್ಲಿ ಅರಿವನ್ನು ಸೃಷ್ಟಿಸುವುದರ ಮೂಲಕ ಗುರು ಸೃಷ್ಟಿಕರ್ತನಾಗುತ್ತಾನೆ. ಜೀವನವನ್ನು






ನಿಭಾಯಿಸುವ, ನಿರ್ವಹಿಸುವ, ನಿಯಂತ್ರಿಸುವ, ನಿರ್ದೇಶಿಸುವ ರೀತಿಯನ್ನು ಕಲಿಸುವ ಮೂಲಕ ಗುರು ಸ್ಥಿತಿಕರ್ತನಾಗುತ್ತಾನೆ ಹಾಗೂ ನಾವು ಲಯವಾದ ಮೇಲೂ ನಮ್ಮ ಹೆಸರು ಇಲ್ಲಿ ಉಳಿಸುವಂತೆ ನೆನಪನ್ನು ಬಿಟ್ಟು ಹೋಗುವಂತೆ ಮಾಡುವ ಮೂಲಕ ಗುರು ಲಯಕರ್ತನಾಗುತ್ತಾನೆ ಎಂದರು.

ಗುರುವಂದನೆ ಸ್ವೀಕರಿಸಿದವರು: ಸೂರ್ಯನಾರಾಯಣ್, ಎಂ.ವಿ. ರಾಮಣ್ಣ, ಹೆಚ್.ಬಿ. ಪಾಪೇಗೌಡ, ಹೆಚ್.ಎಸ್. ಬಸವರಾಜು, ಬಿ.ಪಿ. ಕಲಕಬ್ಬಮಠ, ಕೆ. ವೆಂಕಟಪ್ಪ, ನಾಗರಾಜು, ಎಂ. ಹನುಮಂತರಾಯಪ್ಪ, ಎಸ್.ಪಿ. ಬೈಲಾಪುರ, ಕೆ.ಎನ್. ಚಂದ್ರಮ್ಮ

ಗುರುವಂದನೆ ಸಲ್ಲಿಸಿದವರು: ಶಶಿಕಲಾ, ಹೇಮಲತಾ, ಉಷಾ, ಪ್ರಭಾವತಿ, ಶೋಭಾ, ಪುಷ್ಪಲತಾ, ಜಯಮಾಲಾ, ಸುಜಾತ, ಚಂದ್ರಮ್ಮ, ಆಶಿಯ, ರಾಧಾ, ಕೆಂಪಮ್ಮ, ಸೌಮ್ಯ, ವೆಂಕಟಲಕ್ಷ್ಮಿ, ನಳಿನ, ಪದ್ಮಾವತಿ,ಅರುಣ್‌ಕುಮಾರ್,ಗಂಗಾಧರ್, ಮಹೇಶ್, ಆನಂದ್, ಧನಂಜಯ, ಪ್ರವೀಣ್ ಕುಮಾರ್, ಕೃಷ್ಣಮೂರ್ತಿ, ಅಭಿಷೇಕ್, ಸಿದ್ದರಾಜು, ಸುರೇಶ್, ಶ್ರೀನಿವಾಸ್, ಹರೀಶ್, ಶ್ರೀನಿವಾಸ್ ಮತ್ತು ಲಕ್ಷ್ಮಣ್ ಶೋಭಾರವರಿಂದ ಪ್ರಾರ್ಥನೆ, ಜಯಮಾಲಾರವರಿಂದ ಸ್ವಾಗತ, ಶಶಿಕಲಾ ಮತ್ತು ಹೇಮಲತಾರವರಿಂದ ನಿರೂಪಣೆ, ಈಗಿನ ಮುಖ್ಯೋಪಾಧ್ಯಾಯರಾದ ಶ್ರೀಕಾಂತ್ ರವರಿಂದ ವಂದನಾರ್ಪಣೆ ನೆರವೇರಿತು.

ಹಳೆ ವಿದ್ಯಾರ್ಥಿಗಳಾದ ಅರುಣ್ ಕುಮಾರ್, ಮಹೇಶ್, ಗಂಗಾಧರ್ ರವರು 20 ವರ್ಷಗಳ ಹಿಂದಿನ ತಮ್ಮ ಶಾಲಾ ಬದುಕಿನ ನೆನಪನ್ನು ಮೆಲುಕು ಹಾಕಿದರು.

ಹಾಗೆಯೇ ಗುರುವಂದನೆ ಸ್ವೀಕರಿಸಿದ ನಿವೃತ್ತ ಶಿಕ್ಷಕರು ಆ ಕಾಲದ ಶಿಕ್ಷಣದ ವೈಶಿಷ್ಟತೆಯನ್ನು ಸಾರಿದರು. ಹಳೆ ವಿದ್ಯಾರ್ಥಿ ಗಂಗಾಧರ್ ಅವರ ಸಂಘಟನಾ ಚತುರತೆ ಎಲ್ಲರ ಗಮನ ಸೆಳೆಯಿತು. ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.

**ವರದಿ: ಮಣ್ಣೆ ಮೋಹನ್**

## ಮಹಾಲಿಂಗಪ್ಪ ತಿರಕಪಡಿ ನಿಧನ



**ಬನಹಟ್ಟಿ :** ಇಲ್ಲಿಯ ಬಸವ ನಗರ ನಿವಾಸಿ ಮಹಾಲಿಂಗಪ್ಪ ತಿರಕಪಡಿ ತಮ್ಮ 82 ನೆಯ ವಯಸ್ಸಿನಲ್ಲಿ ಸಪ್ಟೆಂಬರ್ 17 ರಂದು ನಿಧನರಾದರು. ಮೃತರು ತಮ್ಮ ಹಿಂದೆ ಪತ್ನಿ, ಓರ್ವ ಪುತ್ರ ಹಾಗು ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

## ವಸಂತಾ ವಾಸು ಕೋಪರ್ಡೆ ನಿಧನ



**ಬನಹಟ್ಟಿ :** ಇಲ್ಲಿನ ಕೆ.ಎಚ್.ಡಿ.ಸಿ. ನಿವಾಸಿ ಶ್ರೀಮತಿ ವಸಂತಾ ವಾಸುದೇವ ಕೋಪರ್ಡೆ ತಮ್ಮ 70 ನೆಯ ವಯಸ್ಸಿನಲ್ಲಿ ಸಪ್ಟೆಂಬರ್ 17 ರಂದು ನಿಧನರಾದರು. ಮೃತರು ತಮ್ಮ ಹಿಂದೆ ಪತಿ, ನಾಲ್ವರು ಪುತ್ರರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಪತಿ ವಾಸುದೇವ ಕೋಪರ್ಡೆ ನಗರಸಭೆಯ ಮಾಜಿ ಸದಸ್ಯರು ಹಾಗೂ ವಿದ್ಯುತ್ ಚಾಲಿತ ಮಗ್ಗಗಳ ನೇಕಾರ ಕಾಮಿ9ಕರ ಧುರೀಣರಾಗಿದ್ದಾರೆ.




**ಮೂಡಲಗಿ :** ಮೂಡಲಗಿ ಶಿಕ್ಷಣ ಸಂಸ್ಥೆಯ ಶ್ರೀ ಶಿವಭೋದರಂಗ ಸಂಯುಕ್ತ ಪದವಿ ಪೂರ್ವ ಮಹಾವಿದ್ಯಾಲಯಮೂಡಲಗಿಕಾಲೇಜಿನ ವಿದ್ಯಾರ್ಥಿನಿ ಪೂಜಾ ಮಠಪತಿಇವರುತೆಲಂಗಾಣದಲ್ಲಿ ಸೆಪ್ಟೆಂಬರ್ 14 ರಿಂದ 16ರವರಗೆ ನಡೆದ ಸೌತ್‌ಜೂನ್ ನ್ಯಾಷನಲ್ ಸೈಕ್ಲಿಂಗ್ ಸ್ಪರ್ಧೆಯಲ್ಲಿಮೂವತ್ತುಕಿಲೋಮೀಟರ್‌ಟೈನ್‌ಟೈಲ್ಸ್ ವಿಭಾಗದಲ್ಲಿ ಬೆಳ್ಳಿಯ ಪದಕ ಪಡೆದು ಸಂಸ್ಥೆಯ ಹಾಗೂ ಕಾಲೇಜಿನಕೀರ್ತಿಯನ್ನು ಹೆಚ್ಚಿಸಿದ್ದಾರೆ ಈ ವಿದ್ಯಾರ್ಥಿಯ ಸಾದನೆಯಕಂಡು ಸಂಸ್ಥೆಯಅಧ್ಯಕ್ಷವ್ಹಿ. ಆರ್. ಸೋನವಾಲ್ಕರ, ಉಪಾಧ್ಯಕ್ಷಆರ್.ಪಿ.ಸೋನವಾಲ್ಕರ, ಸಂಸ್ಥೆಯ ನಿರ್ದೇಶಕರು ಮತ್ತುಕಾಲೇಜಿನ ಪ್ರಾಚಾರ್ಯರುಉಪನ್ಯಾಸಕರು ಹಾಗೂ ಸಿಬ್ಬಂದಿಗಳು ಶುಭಕೋರಿದ್ದಾರೆ.

## ಲಗಮವ್ವ ಹೂಲಿಕಟ್ಟಿ ನಿಧನ



**ಬನಹಟ್ಟಿ :** ಇಲ್ಲಿಯ ನಿವಾಸಿ ಲಗಮವ್ವ ಹೂಲಿಕಟ್ಟಿ ತಮ್ಮ 72 ನೆಯ ವಯಸ್ಸಿನಲ್ಲಿ ಸಪ್ಟೆಂಬರ್ 18 ರಂದು ನಿಧನರಾದರು. ಮೃತರು ತಮ್ಮ ಹಿಂದೆ ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

## ಸಿದ್ರಾಮಪ್ಪ ಚನ್ನಮಲ್ಲಪ್ಪ ಕುಂಬಾರ ನಿಧನ



**ರಬಕವಿ :** ಇಲ್ಲಿಯ ಕುಂಬಾರ ಸಮಾಜದ ಹಿರಿಯರಾದ ಸಿದ್ರಾಮಪ್ಪ ಚನ್ನಮಲ್ಲಪ್ಪ ಕುಂಬಾರ ತಮ್ಮ 87 ನೆಯ ವಯಸ್ಸಿನಲ್ಲಿ ಸಪ್ಟೆಂಬರ್ 18 ರಂದು ನಿಧನರಾದರು. ಮೃತರು ತಮ್ಮ ಹಿಂದೆ ನಾಲ್ಕು ಜನ ಪುತ್ರರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State